ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತಾನು ದಾವಾ ಸ್ವತ್ತಿನ ಮಾಲೀಕನೆನ್ನುವುದನ್ನು ಒಪ್ಪಿಕೊಂಡು ವಾದಪತ್ರದ ಇತರ ಎಲ್ಲಾ ಅಂಶಗಳು, ಅಂದರೆ ತನ್ನ ಮತ್ತು ವಾದಿಯ ನಡುವಿನ ಖರೀದಿ ವ್ಯವಹಾರ, ತಾನು ವಾದಿಯ ಪರವಾಗಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟು ಮುಂಗಡ ಖರೀದಿ ಹಣವಾಗಿ ರೂ.2,50,000/–ವನ್ನು ಸ್ವೀಕರಿಸಿದ್ದು ಮತ್ತು ಕರಾರಿನ ಭಾಗಶಃ ಕಾರ್ಯವಾಗಿ ವಾದಿಗೆ ದಾವಾ ಸ್ವತ್ತಿನ ಸ್ವಾಧೀನವನ್ನು ಹಸ್ತಾಂತರಿಸಿರುವುದನೆಲ್ಲ ನಿರಾಕರಿಸಿರುತ್ತಾನೆ. ಪ್ರತಿವಾದಿಯ ಪ್ರಕಾರ ತನ್ನ ಮಗಳ ಮದುವೆ ಮಾಡುವ ಸಲುವಾಗಿ ಆತನು ವಾದಿಯಿಂದ ರೂ.2,50,000/–ವನ್ನು ಕೈಗಡ ಸಾಲವಾಗಿ ಪಡೆದುಕೊಂಡಿದ್ದು ಆ ಸಾಲದ ವ್ಯವಹಾರದ ಭದ್ರತೆಗಾಗಿ ವಾದಿಯು ಪ್ರತಿವಾದಿಯ ಸಹಿಗಳನ್ನು ಕೆಲವು ಖಾಲಿ ಛಾಪಾ ಕಾಗದದ ಮೇಲೆ ಪಡೆದುಕೊಂಡು ಖರೀದಿ ಕರಾರು ಪತ್ರವನ್ನು ಸೃಷ್ಟಿಸಿರುತ್ತಾನೆ. ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರುವುದಿಲ್ಲ. ಪ್ರತಿವಾದಿಯು ಕಾನೂನು ನೋಟೀಸನ್ನು ಸ್ವೀಕರಿಸಿದ ಬಳಿಕ ವಾದಿಯ ಬಳಿಗೆ ಹೋಗಿ ಸಾಲದ ಹಣವನ್ನು ಮರುಪಾವತಿ ಮಾಡುವುದಾಗಿ ಹೇಳಿದ್ದು ಅದನ್ನು ವಾದಿಯು ತಿರಸ್ಕರಿಸಿದ್ದನು. ದಾವಾವು ಕಾಲಮಿತಿಯ ಒಳಗಡೆ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯ ವಾಸದ ಮನೆ ಮತ್ತು ಕೃಷಿ ಜಮೀನು ಇದ್ದು ಅದು ಆತನ ಜೀವನೋಪಾಯದ ಏಕೈಕ ಮೂಲವಾಗಿದ್ದು ದಾವಾವನ್ನು ನಿರ್ದಿಷ್ಟ ಪರಿಹಾರಕ್ಕಾಗಿ ಡಿಕ್ರಿ ಮಾಡಿದಲ್ಲಿ ಪ್ರತಿವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ದಾವಾವನ್ನು ಖರ್ಚುಸಹಿತ ವಜಾ ಮಾಡಲು ಕೇಳಿಕೊಂಡಿರುತ್ತಾರೆ.

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

**2. Frame proper issues on the basis of following pleadings.**

**Marks:15**

**O.S. No.298/2012**

**Plaintiff:** Smt.Sundaramma

Vs

**Defendants:** Sri Ramesha and 4 others.

**PLAINT**

The suit A schedule property measures 4 acres 30 guntas and suit B schedule property measures 3 acre 35 guntas of land in Sy.No.28 and 30 Gonikoppa village of Virajpete Taluk. The plaintiff is the married daughter of Sri Basappa, who died during the year 2007. The defendant No.1 and 2 are the elder brothers of the plaintiff and sons of Sri Basappa. The defendant No.3 and 4 are the married daughters of Sri Basappa and elder sisters of plaintiff and defendant No.1 and 2. The defendant No.5 is the purchaser of suit 'B' schedule property from the defendant No.1 vide registered sale deed dated 23.03.2011. The suit properties are the ancestral and joint family properties of the plaintiff and defendant No.1 to 4. The plaintiff has got 1/5th share over the suit property. After her marriage, plaintiff is residing in her husband's house at Hunsur. The defendant No.1 and 2 are looking after and managing the suit property and appropriating its income, without giving any share to the plaintiff. Recently plaintiff came to know that defendant No.1 has sold the suit 'B' schedule property to the defendant No.5, without the consent of others and behind their back. Said sale is not for any family necessities and it is not binding on the plaintiff. The plaintiff requested the defendant No.1 and 2 to divide the suit properties between them and allot her 1/5th share. The defendant

Linking Laws
Link Life with Law
: 773 774 6465
www.LinkingLaws.com



No.1 and 2 have refused to allot the plaintiff's share, which made the plaintiff to file the present suit.

On all these grounds, plaintiff claimed a decree for partition and separate possession of her 1/5th share over the suit property and also for mesne profit.

**WRITTEN STATEMENT**

The defendant No.1, in his written statement, admitted the relationship between them and denied all other plaint averments. According to the defendant No.1, suit properties were the absolute properties of their father Sri Basappa, as it was granted to him by the Land Tribunal, Virajpete. During his lifetime, Sri Basappa has executed a registered will in favour of the defendant No.1 bequeathing the suit B schedule property. On the basis of the said will, after the death of Sri Basappa, defendant No.1 became the absolute owner of the suit 'B' schedule property and to construct the house, he has sold the B schedule property to the defendant No.5, vide registered sale deed dated 23.03.2011. After the death of his father, defendant No.1 has performed the marriages of plaintiff and defendant No.3 and 4 and incurred huge expenses for the same. Even if the plaintiff and defendant No.3 and 4 have got any share in the suit property, same has been given to them at the time of their marriage. The suit is not properly valued and requisite court fee has not been paid on the plaint. This court has no jurisdiction to try this suit. On all these grounds, defendant No.1 prayed for dismissal of the suit with costs.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

Linking Laws
Link Life with Law
: 773 774 6465
www.LinkingLaws.com



The defendant No. 2 filed the memo to adopt the written statement of defendant No.1. The defendant No.3 and 4 have filed written statement and admitted the claim of the plaintiff and prayed for allotment of their 1/5th share over the suit property.

The defendant No.5, in his written statement, contented that he is the bonafide purchaser of the suit B schedule property. Even if the plaintiff and defendant No.2 to 4 have got any share in the suit property, same can be allotted in the suit A schedule property. The suit, without seeking the relief of declaration, is not maintainable. On all these grounds, defendant No.5 prayed for dismissal of the suit with costs.

2. ಈ ಕೆಳಗಿನ ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದ ಮೇಲೆ ವಿವಾದಾಂಶಗಳನ್ನು ರೂಪಿಸಿ:

ಅಂಕಗಳು: 15

ಮೂಲದಾವೆ ಸಂಖ್ಯೆ.298/2012

ವಾದಿ: ಶ್ರೀಮತಿ ಸುಂದರಮ್ಮ

ವಿರುದ್ಧ

ಪ್ರತಿವಾದಿಯರು: ಶ್ರೀ ರಮೇಶ ಮತ್ತು ನಾಲ್ಕು ಮಂದಿ ಇತರರು

ವಾದಪತ್ರ

ದಾವಾ ಎ ಷೆಡ್ಯೂಲ್ ಆಸ್ತಿ 4 ಎಕರೆ 30 ಗುಂಟೆ ಮತ್ತು ದಾವಾ ಬಿ ಷೆಡ್ಯೂಲ್ ಆಸ್ತಿ 3 ಎಕರೆ 35 ಗುಂಟೆ ಜಮೀನು ವಿರಾಜಪೇಟೆ ತಾಲೂಕು ಗೋಣಿಕೊಪ್ಪ ಗ್ರಾಮದ ಸರ್ವೆ ನಂ.28 ಮತ್ತು 29ರಲ್ಲಿ ಇರುತ್ತದೆ. ವಾದಿಯು ಶ್ರೀ ಬಸಪ್ಪ ಇವರ ವಿವಾಹಿತ ಮಗಳಾಗಿದ್ದು ಆತನು 2007ನೇ ಸಾಲಿನಲ್ಲಿ ತೀರಿಕೊಂಡಿದ್ದನು. 1 ಮತ್ತು 2ನೇ ಪ್ರತಿವಾದಿಯರು ವಾದಿಯ ಅಣ್ಣಂದಿರು ಮತ್ತು ಶ್ರೀ ಬಸಪ್ಪನ ಗಂಡು ಮಕ್ಕಳು. ಪ್ರತಿವಾದಿ 3 ಮತ್ತು 4 ಶ್ರೀ ಬಸಪ್ಪನ ವಿವಾಹಿತ ಹೆಣ್ಣು ಮಕ್ಕಳು ಮತ್ತು ವಾದಿ ಮತ್ತು ಪ್ರತಿವಾದಿ 1 ಮತ್ತು 2 ಇವರ ಅಕ್ಕಂದಿರಾಗಿರುತ್ತಾರೆ. 5ನೇ ಪ್ರತಿವಾದಿಯು ದಾವಾ ಬಿ ಷೆಡ್ಯೂಲ್ ಸ್ವತ್ತನ್ನು 1ನೇ ಪ್ರತಿವಾದಿಯಿಂದ ದಿನಾಂಕ 23.03.2011ರ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತುಗಳು ವಾದಿ ಮತ್ತು 1 ರಿಂದ 4ನೇ ಪ್ರತಿವಾದಿಯರ

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ವಾದಿಗೆ ದಾವಾ ಸ್ವತ್ತುಗಳ ಮೇಲೆ 1/5ನೇ ಭಾಗದ ಹಿಸ್ಸೆ ಇರುತ್ತದೆ. ತನ್ನ ಮದುವೆಯ ಬಳಿಕ ವಾದಿಯು ಹುಣಸೂರಿನಲ್ಲಿರುವ ತನ್ನ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಾಳೆ. 1 ಮತ್ತು 2ನೇ ಪ್ರತಿವಾದಿಯರು ದಾವಾ ಸ್ವತ್ತುಗಳನ್ನು ನೋಡಿಕೊಂಡು ವ್ಯವಹರಿಸಿ ಅದರ ಆದಾಯವನ್ನು ಪಡೆದುಕೊಂಡಿದ್ದು ವಾದಿಗೆ ಯಾವುದೇ ಹಿಸ್ಸೆಯನ್ನು ಕೊಟ್ಟಿರುವುದಿಲ್ಲ. ಇತ್ತೀಚೆಗೆ 1ನೇ ಪ್ರತಿವಾದಿಯು ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಇತರರಿಂದ ಒಪ್ಪಿಗೆ ಪಡೆಯದೆ ಅವರಿಗೆ ತಿಳಿಯದಂತೆ 5ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ವಾದಿಯ ಗಮನಕ್ಕೆ ಬಂದಿರುತ್ತದೆ. ಆ ಮಾರಾಟ ಕುಟುಂಬದ ಯಾವುದೇ ಅವಶ್ಯಕತೆಗಳಿಗಾಗಿ ಆಗಿರುವುದಿಲ್ಲ ಮತ್ತು ಅದು ವಾದಿಗೆ ಬದ್ಧಪಡಿಸುವುದಿಲ್ಲ. ವಾದಿಯು ದಾವಾ ಸ್ವತ್ತನ್ನು ವಿಂಗಡಿಸಿ ಆಕೆಯ 1/5ನೇ ಹಿಸ್ಸೆಯನ್ನು ಕೊಡಬೇಕೆಂದು 1 ಮತ್ತು 2ನೇ ಪ್ರತಿವಾದಿಯರನ್ನು ಕೇಳಿಕೊಂಡಿರುತ್ತಾಳೆ. 1 ಮತ್ತು 2ನೇ ಪ್ರತಿವಾದಿಯರು ವಾದಿಯ ಹಿಸ್ಸೆಯನ್ನು ಕೊಡಲು ನಿರಾಕರಿಸಿದ್ದರಿಂದ ವಾದಿಯು ಈ ದಾವಾವನ್ನು ಸಲ್ಲಿಸಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ದಾವಾ ಸ್ವತ್ತಿನ ಮೇಲೆ ಆಕೆಗೆ ಇರುವ 1/5 ಹಿಸ್ಸೆಯನ್ನು ವಿಂಗಡಿಸಿ ಅದರ ಪ್ರತ್ಯೇಕ ಸ್ವಾಧೀನವನ್ನು ಕೊಡಲು ಮತ್ತು ಮಧ್ಯಂತರ ಲಾಭಾಂಶಕ್ಕಾಗಿ ಡಿಕ್ರಿಯನ್ನು ಕೋರಿರುತ್ತಾರೆ.

## ಪ್ರತಿವಾದ ಪತ್ರ

1ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಅವರ ನಡುವಿನ ಸಂಬಂಧವನ್ನು ಒಪ್ಪಿಕೊಂಡು ವಾದಪತ್ರದ ಇತರ ಎಲ್ಲಾ ಅಂಶಗಳನ್ನು ನಿರಾಕರಿಸಿದ್ದಾರೆ. 1ನೇ ಪ್ರತಿವಾದಿಯ ಪ್ರಕಾರ ದಾವಾ ಸ್ವತ್ತು ಅವರ ತಂದೆ ಶ್ರೀ ಬಸಪ್ಪನವರಿಗೆ ವಿರಾಜಪೇಟೆ ಭೂನ್ಯಾಯ ಮಂಡಳಿಯಿಂದ ಮಂಜೂರಾದ ಅವರ ಸಂಪೂರ್ಣ ಹಕ್ಕಿನ ಆಸ್ತಿಯಾಗಿದೆ. ತನ್ನ ಜೀವಿತ ಕಾಲದಲ್ಲಿ ಶ್ರೀ ಬಸಪ್ಪನವರು ಒಂದು ನೊಂದಾಯಿತ ಮರಣಶಾಸನ ಪತ್ರದ ಮೂಲಕ ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು 1ನೇ ಪ್ರತಿವಾದಿಯ ಪರವಾಗಿ ಉಯಿಲು ಮಾಡಿದ್ದರು. ಶ್ರೀ ಬಸಪ್ಪನವರ ಮರಣದ ನಂತರ ಆ ಮರಣ ಶಾಸನ ಪತ್ರದ ಮೂಲಕ 1ನೇ ಪ್ರತಿವಾದಿಯು ದಾವಾ ಬಿ ಷೆಡ್ಯೂಲ್ ಆಸ್ತಿಯ ಸಂಪೂರ್ಣ ಮಾಲೀಕನಾಗಿದ್ದು ಮನೆ ಕಟ್ಟುವ ಸಲುವಾಗಿ ಆತನು ದಾವಾ ಬಿ ಷೆಡ್ಯೂಲ್ ಸ್ವತ್ತನ್ನು 5ನೇ ಪ್ರತಿವಾದಿಗೆ ದಿನಾಂಕ 23.03.2011ರ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದನು. ತನ್ನ ತಂದೆಯ ಮರಣದ ನಂತರ 1ನೇ ಪ್ರತಿವಾದಿಯು ವಾದಿ ಮತ್ತು 3 ಮತ್ತು 4ನೇ ಪ್ರತಿವಾದಿಯರ

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ಮದುವೆ ಮಾಡಿಸಿದ್ದು ಅದಕ್ಕೆ ಬಹಳಷ್ಟು ಹಣ ಖರ್ಚು ಮಾಡಿರುತ್ತಾನೆ. ವಾದಿ ಮತ್ತು 3 ಮತ್ತು 4ನೇ ಪ್ರತಿವಾದಿಯಲ್ಲಿ ದಾವಾ ಸ್ವತ್ತಿನ ಮೇಲೆ ಯಾವುದೇ ಹಿಸ್ಸೆ ಇದ್ದರೂ ಕೂಡ ಅದನ್ನು ಅವರಿಗೆ ಅವರವರ ಮದುವೆಯ ಕಾಲದಲ್ಲಿ ನೀಡಲಾಗಿದೆ. ದಾವಾವನ್ನು ಸೂಕ್ತ ರೀತಿಯಲ್ಲಿ ಮೌಲ್ಯ ಮಾಪನ ಮಾಡಿಲ್ಲ ಮತ್ತು ನಿಗದಿತ ನ್ಯಾಯಾಲಯದ ಶುಲ್ಕವನ್ನು ವಾದಪತ್ರದೊಂದಿಗೆ ಕೊಟ್ಟಿರುವುದಿಲ್ಲ. ಈ ದಾವಾವನ್ನು ವಿಚಾರಿಸಲು ಈ ನ್ಯಾಯಾಲಯಕ್ಕೆ ಕಾರ್ಯವ್ಯಾಪ್ತಿ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ 1ನೇ ಪ್ರತಿವಾದಿಯು ದಾವಾವನ್ನು ಖರ್ಚುಸಹಿತ ವಜಾ ಮಾಡಲು ಕೇಳಿಕೊಂಡಿರುತ್ತಾನೆ.

2ನೇ ಪ್ರತಿವಾದಿಯು 1ನೇ ಪ್ರತಿವಾದಿಯು ಸಲ್ಲಿಸಿದ ಪ್ರತಿವಾದ ಪತ್ರವನ್ನು ಅಳವಡಿಸುವುದಾಗಿ ಜ್ಞಾಪಕವನ್ನು ಸಲ್ಲಿಸಿರುತ್ತಾರೆ. 3 ಮತ್ತು 4ನೇ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ವಾದಿಯ ಸಾಧನೆಯನ್ನು ಒಪ್ಪಿಕೊಂಡು ದಾವಾ ಸ್ವತ್ತಿನ ಮೇಲೆ ತಮಗೆ ಇರುವ 1/5ನೇ ಹಿಸ್ಸೆಯನ್ನು ಮಂಜೂರು ಮಾಡಲು ವಿನಂತಿಸಿದ್ದಾರೆ.

5ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ತಾನು ದಾವಾ ಬಿ ಷೆಡ್ಯೂಲ್ ಸ್ವತ್ತಿನ ಲಾಭದಾಯಕ ಖರೀದಿದಾರನಾಗಿರುತ್ತೇನೆ. ವಾದಿ ಮತ್ತು ಪ್ರತಿವಾದಿ 2 ರಿಂದ 4 ರವರಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಿಸ್ಸೆ ಇದ್ದರೂ ಕೂಡ ಅದನ್ನು ದಾವಾ ಎ ಷೆಡ್ಯೂಲ್ ಆಸ್ತಿಯಲ್ಲಿ ಕೊಡಬಹುದಾಗಿರುತ್ತದೆ. ಘೋಷಣಾತ್ಮಕ ಪರಿಹಾರವನ್ನು ಕೇಳದೇ ಇರುವುದರಿಂದ ಈ ದಾವಾ ಊರ್ಜಿತವಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ 5ನೇ ಪ್ರತಿವಾದಿಯು ದಾವಾವನ್ನು ಖರ್ಚುಸಹಿತ ವಜಾ ಮಾಡಲು ಕೇಳಿಕೊಂಡಿರುತ್ತಾರೆ.

**3. Write a considered Judgment on the basis of following pleadings, oral and documentary evidence by giving valid and cogent reasons**

**Marks: 70**

**IN THE COURT OF CIVIL JUDGE, DHARWAD**

**O.S.No.128/2011**

Narasimhaiah
Aged about 62 years,
S/o Hanumantha,
R/of Sapthapura,
Dharwad. ----Plaintiff

**Vs**

Prasanna Kumar
Aged about 34 years,
S/o Somashekara,
R/of Dhavalagiri,
Dharwad. ---- Defendant

DATE OF FILING THE SUIT: **01-03-2011**

**PLAINT**

The suit property described in the plaint schedule is a shop premises bearing No.13/1, Ground Floor, Hanumantha Complex, Sapthapura, Dharwad, measuring 20x8 feet. The defendant is a tenant under the plaintiff in respect of the suit premises on monthly rent of Rs.4,000/- and he is running a jewellery shop in the suit premises. The tenancy month commences from the 1st day of the English calendar month and ends on the last day. The suit premises is required by the plaintiff to start a mobile shop by his son, who is unemployed. The defendant is very irregular in paying the monthly rent. The defendant is liable to pay arrears of rent to the tune of Rs.1,16,000/- as on the date of filing this suit. Therefore, plaintiff requested the defendant to pay the arrears of rent and vacate the suit premises. When the defendant failed to comply with the request of the plaintiff, plaintiff issued a legal notice on 01.11.2010 and terminated the tenancy of the defendant and called upon him to vacate the suit premises within 15 days from the date of service of legal notice and to pay the arrears of rent. In spite of service of legal notice, defendant, neither gave any reply nor complied the demand made in the legal notice, which made the plaintiff to file the present suit.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India (UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

On all these grounds, plaintiff claimed a decree for ejectment against the defendant, by directing him to vacate and hand over the vacant possession of the suit premises to the plaintiff and to pay arrears of rent to the tune of Rs.1,16,000/-.

## WRITTEN STATEMENT

The defendant, in his written statement, admitted that the plaintiff is the owner of the suit premises and he occupies the suit premises as a tenant under the plaintiff on monthly rent of Rs.4,000/- and running a Jewellery shop. The defendant denied other plaint averments, regarding plaintiffs requirement of the suit premises, allegation of arrears of rent and also the measurement of the suit premises and valid termination of tenancy. According to the defendant, actual measurement of the suit premises is less than 14 sq. meters. Therefore, provisions of the Karnataka Rent Act, 1999 is applicable to the suit premises and he is a protected tenant under the said Act. Hence, suit filed by the plaintiff under general law by terminating the tenancy is not maintainable. The defendant disputed the validity of termination of tenancy by contending that sufficient time has not been given before terminating the tenancy and there is no proper service of notice on him. The defendant also contended that he has been paying the rent regularly and plaintiff is not in the habit of issuing the rent receipts. The defendant further contended that he is running a Jewellery shop in the suit premises and it is only source of income for livelihood of his family and if he is evicted from the suit premises, he and his family members will be put to irreparable loss and hardship. The defendant further contended that plaintiff demanded higher rent from him and when he refused to pay

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

the same, plaintiff filed this suit. On all these grounds, defendant prayed for dismissal of the suit with costs.

**ISSUES**

1. **Whether the provisions of the Karnataka Rent Act, 1999 is applicable to the suit premises?**

2. **Whether the plaintiff proves the legally valid termination of tenancy rights of the defendant?**

3. **Whether the plaintiff proves that as on the date of filing the suit Rs.1,16,000/- is due from the defendant towards the arrears of rent?**

4. **Whether the defendant to proves that he has been paying the rent of the suit premises regularly and not due to pay any rent to the plaintiff?**

5. **Whether the plaintiff is entitle for a decree for ejectment of the defendant from the suit premises?**

6. **Whether the plaintiff is entitle for decree for arrears of rent claimed by him?**

7. **What order or decree?**

**ORAL AND DOCUMENTARY EVIDENCE OF THE PLAINTIFF**

The plaintiff, who was examined before the court as PW1, has reiterated the plaint averments in his examination-in-chief and deposed about his ownership over the suit premises and defendant occupying the same as a tenant under him on monthly rent of Rs.4,000/- and running a Jewellery shop in the suit premises. PW1 further deposed that defendant is very irregular in paying the rent

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
✆ : 773 774 6465
www.LinkingLaws.com



and he is due to pay a sum of Rs.1,16,000/- as on the date of filing this suit. PW1 further deposed that he requires suit premises to run mobile shop by his son, who is unemployed. PW1 further deposed that he requested the defendant to vacate the suit premises and pay the arrears of rent and defendant failed to comply his request. PW1 further deposed that on 01.11.2010 he has issued a legal notice to the defendant and terminated his tenancy and requested him to pay the arrears of rent. PW1 further deposed that in spite of service of legal notice, defendant failed to vacate the suit premises and pay the arrears of rent, which made him to file the present suit.

During the course of his cross examination by the counsel for defendant, PW1 admitted that apart from the suit premises, there are other shops in the same complex owned by him and two of those shops were still vacant. PW1 denied that the actual measurement of the suit premises in occupation of the defendant is less than 14 sq. meters. PW1 denied the suggestion that in Ex.P1 the measurement was deliberately shown on the higher side. PW1 denied that he has demanded the higher rent from the defendant and when he refused to pay the same, he filed this suit. When it was suggested to PW1 that his son can start his mobile shop in other vacant shop premises in the same complex, PW1 said that those premises are not suitable for running the mobile shop. PW1 denied that even though defendant has been paying the rent, he has not issued the rent receipt to him.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India (UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

**The plaintiff has marked following documents on his behalf:**

**Ex.P1: Katha Extract.**

This katha extract shows that the suit premises stands in the name of the plaintiff and the measurement of the suit premises is shown as 20x8 feet.

**Ex.P2: Legal Notice**

This legal notice was issued by the plaintiff through his counsel on 01.11.2010, whereby he called upon the defendant to pay the arrears of rent to the tune of Rs.1,00,000/- and terminated the tenancy of the defendant and requested him to vacate the suit premises within 15 days from the date of service of legal notice.

**Ex.P3: Postal Receipt**

This Postal Receipt shows that Ex.P2 legal notice was sent to the defendant by way of registered post on 01.11.2010.

**Ex.P4: Postal Acknowledgement**

This postal acknowledgement shows that the legal notice issued to the defendant by registered post was received by the wife of the defendant.

## ORAL AND DOCUMENTARY EVIDENCE OF THE DEFENDANT

The defendant, who was examined before the court as DW1, has admitted that the plaintiff is the owner of the suit premises and he occupy the same as a tenant under the plaintiff on monthly rent of Rs.4,000/- and running a jewellery shop. DW1 denied the

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

measurement of the suit premises shown by the plaintiff and validity of termination of tenancy and also the arrears of rent. DW1 further deposed that the actual measurement of the suit premises is less that 14 sq. meters and the Karnataka Rent Act, 1999 is applicable to the suit premises. DW1 further deposed that his tenancy rights were not legally terminated. DW1 further deposed that he is running a Jewellery shop in the suit premises, which is only source of livelihood to him and if he is vacated from the suit premises, he will be put to irreparable loss and hardship.

DW1, during the course of his cross examination by the counsel for the plaintiff, admitted that he occupy the suit premises as a tenant under the plaintiff on monthly rent of Rs.4,000/-. DW1 admitted that whenever he has paid the rent to the plaintiff, he has issued rent receipts to him. DW.1 admitted that apart from Ex.D.1 he has no other rent receipt with him to show the payment of rent by him. DW1 admitted that he has no documents with him to show that the measurement of the suit premises is less that 14 sq. meter. DW1 admitted that he and his wife were residing together and legal notice sent by the plaintiff was received by his wife and handed over to him. DW.1 admitted that he has not given any reply for the legal notice issued by the plaintiff.

**The defendant has marked following document on his behalf:**

**Ex.D1: Rent Receipt**

This document shows that the defendant has paid the rent of Rs.16,000/- on 10.10.2008, being the rent for the months of June, July, August and September 2008.

## ARGUMENTS FOR THE PLAINTIFF

The learned counsel appearing for the plaintiff argued that plaintiff's ownership over the suit premises, defendant occupying the same as a tenant and monthly rent as Rs.4,000/- per month were all admitted by the defendant. It was further argued by the learned counsel for the plaintiff that though the defendant contended that the measurement of the suit premises is less than 14 sq. meters and the Karnataka Rent Act, 1999 is applicable to the suit premises, he failed to prove the same. Whereas, Ex.P1 property extract produced by the plaintiff shows that suit premises measures 160 sq. feet and the present suit filed by terminating the tenancy is maintainable. It was further argued by the learned counsel for the plaintiff that there is valid termination of tenancy rights of the defendant, as the legal notice issued to the defendant was served on his wife, as the defendant was not present and 15 days time was given to the defendant to vacate the premises. It was further argued by the learned counsel for the plaintiff that even as per the document produced by the defendant, he paid the rent till September 2008 and there is no evidence to show payment of rent subsequent to September 2008. On all these grounds, learned counsel for the plaintiff prayed to decree the suit with costs.

## ARGUMENTS FOR THE DEFENDANT

The learned counsel for the defendant argued that though in the property extract measurement of the property is shown as 20x8 feet, actual measurement of the plinth area in occupation of the defendant is less than 14 sq. meter. Therefore, the Karnataka Rent Act, 1999 is applicable to the suit premises. It was further argued by

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
✆ : 773 774 6465
www.LinkingLaws.com



the learned counsel for the defendant that the legal notice issued by the plaintiff has not been served personally upon the defendant and sufficient time has not been given while terminating the tenancy and directing the defendant to vacate the premises. Therefore, it was further argued that there is no valid termination of tenancy of the defendant. It was further argued for the defendant that plaintiff/PW1 admitted about he having other premises, in which his son can start his mobile shop. Therefore, suit premises is not required by the plaintiff. On all these grounds, learned counsel for the defendant prayed for dismissal of the suit with costs.

3. ಮೌಖಿಕ ಹಾಗೂ ದಾಖಲಾತಿ ಸಾಕ್ಷಗಳ ಆಧಾರದ ಮೇಲೆ ಸಮಂಜಸ ಹಾಗೂ ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ:

ಅಂಕಗಳು: 70

<u>ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಧಾರವಾಡ</u>

<u>ಮೂಲದಾವೆ ಸಂಖ್ಯೆ 128/2011</u>

ನರಸಿಂಹಯ್ಯ
ಸುಮಾರು 62 ವರ್ಷ ವಯಸ್ಸು
ತಂದೆ: ಹನುಮಂತ,
ವಾಸ: ಸಪ್ತಾಪುರ, ಧಾರವಾಡ — ವಾದಿ

ಮತ್ತು

ಪ್ರಸನ್ನ ಕುಮಾರ್,
ಸುಮಾರು 34 ವರ್ಷ ವಯಸ್ಸು
ತಂದೆ: ಸೋಮಶೇಕರ,
ವಾಸ: ದವಳಗಿರಿ, ಧಾರವಾಡ — ಪ್ರತಿವಾದಿ

ದಾವಾ ಸಲ್ಲಿಸಿದ ದಿನಾಂಕ: <u>01.03.2011</u>

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

## ವಾದಪತ್ರ

ವಾದಪತ್ರದ ಷೆಡ್ಯೂಲ್‌ನಲ್ಲಿ ವಿವರಿಸಿದ ದಾವಾ ಆಸ್ತಿಯು ಧಾರವಾಡ ಸಪ್ತಾಪುರದಲ್ಲಿನ ಹನುಮಂತ ಕಾಂಪ್ಲೆಕ್ಸ್‌ನ ನೆಲಮಹಡಿಯ ಅಂಗಡಿ ಕಟ್ಟಡ ನಂ.13/1, ವಿಸ್ತೀರ್ಣ 20x8 ಅಡಿ ಆಗಿರುತ್ತದೆ. ಪ್ರತಿವಾದಿಯು ವಾದಿಯ ಕೈ-ಕೆಳಗೆ ದಾವಾ ಸ್ವತ್ತಿನ ಬಾಡಿಗೆದಾರನಾಗಿದ್ದು ಅದರ ತಿಂಗಳ ಬಾಡಿಗೆ ರೂ.4,000/- ಆಗಿದ್ದು ಅದರಲ್ಲಿ ಆಭರಣದ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದಾನೆ. ಪ್ರತಿವಾದಿಯ ಬಾಡಿಗೆಯ ಅವಧಿ ಇಂಗ್ಲಿಷ್ ಕ್ಯಾಲಂಡರ್ ತಿಂಗಳಿನ ಮೊದಲನೆ ದಿನದಂದು ಪ್ರಾರಂಭವಾಗಿ ಕೊನೆಯ ದಿನದಂದು ಮುಕ್ತಾಯಗೊಳ್ಳುತ್ತದೆ. ದಾವಾ ಕಟ್ಟಡವು ವಾದಿಗೆ ನಿರುದ್ಯೋಗಿಯಾಗಿರುವ ತನ್ನ ಮಗನಿಗೆ ಒಂದು ಮೊಬೈಲ್ ಅಂಗಡಿಯನ್ನು ಪ್ರಾರಂಭಿಸುವ ಸಲುವಾಗಿ ಬೇಕಾಗಿರುತ್ತದೆ. ಪ್ರತಿವಾದಿಯು ತಿಂಗಳ ಬಾಡಿಗೆಯನ್ನು ಕ್ರಮಬದ್ಧವಾಗಿ ಕಟ್ಟುವಲ್ಲಿ ವಿಫಲನಾಗಿರುತ್ತಾನೆ. ಈ ದಾವಾ ಸಲ್ಲಿಸುವ ದಿನಾಂಕದಂದು ಪ್ರತಿವಾದಿಯು ರೂ.1,16,000/- ಬಾಡಿಗೆ ಬಾಕಿ ಹಣ ಕೊಡಲು ಜವಾಬ್ದಾರನಿರುತ್ತಾನೆ. ಆದುದರಿಂದ ವಾದಿಯು ಪ್ರತಿವಾದಿಗೆ ಬಾಡಿಗೆ ಬಾಕಿಯನ್ನು ಕೊಡಲು ಮತ್ತು ದಾವಾ ಕಟ್ಟಡವನ್ನು ಖಾಲಿ ಮಾಡಿಕೊಡಲು ಕೇಳಿಕೊಂಡಿದ್ದರು. ಪ್ರತಿವಾದಿಯು ವಾದಿಯ ಕೋರಿಕೆಯನ್ನು ಮನ್ನಿಸಲು ವಿಫಲನಾದಾಗ ವಾದಿಯು ದಿನಾಂಕ 01.11.2010ರಂದು ಒಂದು ಕಾನೂನು ನೋಟೀಸನ್ನು ಕೊಟ್ಟು ಪ್ರತಿವಾದಿಯ ಬಾಡಿಗೆ ಹಕ್ಕನ್ನು ರದ್ದುಗೊಳಿಸಿದನು ಮತ್ತು ನೋಟೀಸು ಜಾರಿಯಾದ 15 ದಿನಗಳ ಒಳಗೆ ದಾವಾ ಕಟ್ಟಡವನ್ನು ಖಾಲಿ ಮಾಡಿ ಕೊಡಲು ಮತ್ತು ಬಾಕಿ ಉಳಿದ ಬಾಡಿಗೆ ಹಣವನ್ನು ಪಾವತಿ ಮಾಡಲು ಕೇಳಿಕೊಂಡನು. ಆ ನೋಟೀಸು ಪ್ರತಿವಾದಿಗೆ ಜಾರಿ ಆದರೂ ಕೂಡ ಪ್ರತಿವಾದಿಯು ಯಾವುದೇ ಮರುತ್ತರವನ್ನು ಕೊಟ್ಟಿಲ್ಲ ಮತ್ತು ನೋಟೀಸಿನಲ್ಲಿ ಕೋರಿದ ಕೋರಿಕೆಗಳನ್ನು ಮನ್ನ ಮಾಡಿಲ್ಲವಾದ್ದರಿಂದ ವಾದಿಯು ಈ ದಾವಾವನ್ನು ಸಲ್ಲಿಸಬೇಕಾಯಿತು.

ಈ ಎಲ್ಲಾ ಕಾರಣಗಳಿಂದ ವಾದಿಯು ಪ್ರತಿವಾದಿಗೆ ದಾವಾ ಕಟ್ಟಡವನ್ನು ಖಾಲಿ ಮಾಡಿ ಅದರ ಸ್ವಾಧೀನವನ್ನು ತನಗೆ ಕೊಡಬೇಕು ಮತ್ತು ಬಾಡಿಗೆ ಬಾಕಿ ಹಣವಾದ ರೂ.1,16,000/-ನ್ನು ಪಾವತಿ ಮಾಡಲು ನಿರ್ದೇಶನ ಕೋರಿ ಡಿಕ್ರಿ ಮಾಡಬೇಕು ಎಂದು ಕೇಳಿಕೊಂಡಿರುತ್ತಾನೆ.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India (UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

**ಪ್ರತಿವಾದ ಪತ್ರ**

ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯು ದಾವಾ ಕಟ್ಟಡದ ಮಾಲೀಕ ಮತ್ತು ತಾನು ಅದರ ಬಾಡಿಗೆದಾರನಾಗಿ ಸ್ವಾಧೀನ ಇರುವುದನ್ನು ಮತ್ತು ಅದರ ತಿಂಗಳ ಬಾಡಿಗೆ ರೂ.4,000/- ಎಂದು ಮತ್ತು ತಾನು ಅದರಲ್ಲಿ ಆಭರಣದ ಅಂಗಡಿಯನ್ನು ನಡೆಸಿಕೊಂಡು ಬರುತ್ತಿರುವುದನೆಲ್ಲ ಒಪ್ಪಿಕೊಂಡಿರುತ್ತಾನೆ. ಪ್ರತಿವಾದಿಯು ವಾದಪತ್ರದ ಇತರ ವಿಷಯಗಳೆಂದರೆ ವಾದಿಗೆ ದಾವಾ ಕಟ್ಟಡದ ಅವಶ್ಯಕತೆ ಇರುವುದನ್ನು, ಬಾಡಿಗೆ ಬಾಕಿ ಇಟ್ಟಿರುವುದನ್ನು ದಾವಾ ಕಟ್ಟಡದ ವಿಸ್ತೀರ್ಣವನ್ನು ಮತ್ತು ಕಾನೂನುಬದ್ಧವಾಗಿ ಬಾಡಿಗೆ ಹಕ್ಕನ್ನು ರದ್ದುಪಡಿಸಿರವುದನೆಲ್ಲ ನಿರಾಕರಿಸಿರುತ್ತಾರೆ. ಪ್ರತಿವಾದಿಯ ಪ್ರಕಾರ ದಾವಾ ಕಟ್ಟಡದ ನಿಜವಾದ ಅಳತೆ 14 ಚ.ಮೀ. ಗಳಿಗಿಂತಲು ಕಡಿಮೆ ಇರುತ್ತದೆ. ಆದುದರಿಂದ ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ನಿಭಂದನೆಗಳು ದಾವಾ ಕಟ್ಟಡಕ್ಕೆ ಅನ್ವಯವಾಗುತ್ತದೆ ಮತ್ತು ಆತನು ಆ ಅಧಿನಿಯಮದ ಅಡಿಯಲ್ಲಿ ಸಂರಕ್ಷಿಸಲ್ಪಟ್ಟ ಬಾಡಿಗೆದಾರನಾಗಿರುತ್ತಾನೆ. ಆದುದರಿಂದ ಸಾಮಾನ್ಯ ಕಾನೂನಿನ ಅಡಿಯಲ್ಲಿ ಬಾಡಿಗೆ ಹಕ್ಕನ್ನು ರದ್ದುಪಡಿಸಿ ಸಲ್ಲಿಸಿದ ಈ ದಾವೆ ಊರ್ಜಿತವಾಗುವುದಿಲ್ಲ. ಪ್ರತಿವಾದಿಯು ಬಾಡಿಗೆ ಹಕ್ಕನ್ನು ಕಾನೂನುಬದ್ಧವಾಗಿ ರದ್ದುಪಡಿಸಿರುವುದನ್ನು ಪ್ರಶ್ನಿಸಿ ಬಾಡಿಗೆ ಹಕ್ಕನ್ನು ರದ್ದುಪಡಿಸುವಾಗ ಸಾಕಷ್ಟು ಸಮಯವನ್ನು ಕೊಟ್ಟಿಲ್ಲ ಮತ್ತು ನೋಟೀಸು ಸೂಕ್ತವಾಗಿ ಜಾರಿಯಾಗಿಲ್ಲ ಎನ್ನುತ್ತಾರೆ. ಪ್ರತಿವಾದಿಯು ತಾನು ನಿಯಮಿತವಾಗಿ ಬಾಡಿಗೆಯನ್ನು ಪಾವತಿ ಮಾಡುತ್ತ ಬಂದಿದ್ದು ವಾದಿಯು ಬಾಡಿಗೆ ರಶೀದಿಯನ್ನು ಕೊಡುವ ಹವ್ಯಾಸವನ್ನು ಇಟ್ಟುಕೊಂಡಿರಲಿಲ್ಲ ಎನ್ನುತ್ತಾರೆ. ಪ್ರತಿವಾದಿಯು ತಾನು ದಾವಾ ಕಟ್ಟಡದಲ್ಲಿ ಆಭರಣದ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದು ಅದು ತನ್ನ ಕುಟುಂಬಕ್ಕೆ ಜೀವನೋಪಾಯದ ಏಕೈಕ ಮೂಲವಾಗಿದ್ದು ತನ್ನನ್ನು ದಾವಾ ಕಟ್ಟಡದಿಂದ ಖಾಲಿ ಮಾಡಿಸಿದ್ದಲ್ಲಿ ತನಗೆ ಮತ್ತು ತನ್ನ ಕುಟುಂಬದ ಸದಸ್ಯರಿಗೆ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುತ್ತದೆ ಎನ್ನುತ್ತಾರೆ. ಪ್ರತಿವಾದಿಯ ಪ್ರಕಾರ ವಾದಿಯು ಆತನಿಂದ ಬಾಡಿಗೆ ಹಣ ಹೆಚ್ಚು ಮಾಡಲು ಕೋರಿದ್ದು ಅದಕ್ಕೆ ಪ್ರತಿವಾದಿಯು ಒಪ್ಪಿಕೊಳ್ಳದೆ ಇದ್ದಾಗ ವಾದಿಯು ಈ ದಾವಾವನ್ನು ಮಾಡಿರುತ್ತಾನೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿಯು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿರುತ್ತಾನೆ.

**ವಿವಾದಾಂಶಗಳು**

1. **ಕರ್ನಾಟಕ ಬಾಡಿಗೆ ಅಧಿನಿಯಮ, 1999ರ ನಿಭಂದನೆಗಳು ದಾವಾ ಕಟ್ಟಡಕ್ಕೆ ಅನ್ವಯವಾಗುತ್ತದೆಯೇ?**

2. ವಾದಿಯು ಪ್ರತಿವಾದಿಯ ಬಾಡಿಗೆ ಹಕ್ಕನ್ನು ಕಾನೂನುಬದ್ಧವಾಗಿ ರದ್ದುಪಡಿಸಿರುವುದನ್ನು ಸಾಬೀತು ಪಡಿಸಿದ್ದಾನೆಯೇ?

3. ವಾದಿಯು ಪ್ರತಿವಾದಿಯಿಂದ ಈ ದಾವಾ ಸಲ್ಲಿಸುವ ತಾರೀಖಿನಂದು ರೂ.1,16,000/– ಬಾಡಿಗೆ ಬಾಕಿ ಇರುವುದನ್ನು ಸಾಬೀತು ಪಡಿಸಿದ್ದಾನೆಯೇ?

4. ಪ್ರತಿವಾದಿಯು ತಾನು ದಾವಾ ಕಟ್ಟಡದ ಬಾಡಿಗೆಯನ್ನು ನಿಯಮಿತವಾಗಿ ಪಾವತಿ ಮಾಡಿರುವುದನ್ನು ಮತ್ತು ತನ್ನಿಂದ ಯಾವುದೇ ಬಾಡಿಗೆ ಬಾಕಿ ಇಲ್ಲದಿರುವುದನ್ನು ಸಾಬೀತು ಪಡಿಸಿದ್ದಾನೆಯೇ?

5. ವಾದಿಯು ಪ್ರತಿವಾದಿಯನ್ನು ದಾವಾ ಕಟ್ಟಡದಿಂದ ಖಲ್ಲಾಗೊಳಿಸುವ ಡಿಕ್ರಿಯನ್ನು ಪಡೆಯಲು ಅರ್ಹನಿದ್ದಾನೆಯೇ?

6. ವಾದಿಯು ಬಾಡಿಗೆ ಬಾಕಿಯನ್ನು ವಸೂಲು ಮಾಡುವ ಡಿಕ್ರಿಯನ್ನು ಪಡೆಯಲು ಅರ್ಹನಿದ್ದಾನೆಯೇ?

7. ಯಾವ ಆದೇಶ ಯಾ ಡಿಕ್ರಿ?

## ವಾದಿಯ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯ

ವಾದಿಯು ನ್ಯಾಯಾಲಯದ ಮುಂದೆ ವಾ.ಸಾ.1 ಎಂದು ಸಾಕ್ಷಿ ನುಡಿಯುತ್ತಾ ತನ್ನ ಮುಖ್ಯ ವಿಚಾರಣೆಯಲ್ಲಿ ವಾದ ಪತ್ರದ ವಿಚಾರಗಳನ್ನು ಪುನರ್ ಉಚ್ಚರಿಸುತ್ತ ದಾವಾ ಕಟ್ಟಡಕ್ಕೆ ತಾನು ಮಾಲೀಕನಿರುವುದಾಗಿ ಮತ್ತು ಪ್ರತಿವಾದಿಯು ತಿಂಗಳ ಬಾಡಿಗೆ ರೂ.4,000/–ರ ಪ್ರಕಾರ ದಾವಾ ಕಟ್ಟಡದಲ್ಲಿ ಬಾಡಿಗೆದಾರನಾಗಿದ್ದು ಒಂದು ಆಭರಣದ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದಾನೆ ಎಂದು ನುಡಿಯುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ಪ್ರತಿವಾದಿಯು ನಿಯಮಿತವಾಗಿ ಬಾಡಿಗೆಯನ್ನು ಪಾವತಿ ಮಾಡಿಲ್ಲ ಮತ್ತು ಈ ದಾವಾ ಸಲ್ಲಿಸುವ ದಿನದಂದು ರೂ.1,16,000/– ಬಾಡಿಗೆ ಬಾಕಿ ಕೊಡಲು ಇದೆ ಎಂದು ನುಡಿಯುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ನಿರುದ್ಯೋಗಿಯಾಗಿರುವ ತನ್ನ ಮಗನಿಗೆ ಮೊಬೈಲ್ ಅಂಗಡಿಯನ್ನು ಪ್ರಾರಂಭಿಸಲು ತನಗೆ ದಾವಾ ಕಟ್ಟಡ ಬೇಕು ಎಂದು ನುಡಿಯುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ತಾನು ಪ್ರತಿವಾದಿಗೆ ದಾವಾ ಅಂಗಡಿಯನ್ನು ಖಾಲಿ ಮಾಡಿ ಕೊಡಲು ಮತ್ತು ಬಾಕಿ ಇರುವ ಬಾಡಿಗೆ ಹಣವನ್ನು ಪಾವತಿ ಮಾಡಲು ಕೇಳಿಕೊಂಡಿದ್ದು ಆದರೆ ಪ್ರತಿವಾದಿಯು ತನ್ನ ಕೋರಿಕೆಯನ್ನು ಮನ್ನಿಸಲು ವಿಫಲನಾಗಿದ್ದಾನೆ ಎಂದು ನುಡಿಯುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿ ಹೇಳಿಕೆಯಲ್ಲಿ ದಿನಾಂಕ 01.11.2010ರಂದು ತಾನು ಪ್ರತಿವಾದಿಗೆ ನೋಟೀಸನ್ನು ಕೊಟ್ಟು ಆತನ ಬಾಡಿಗೆ


Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
✆ : 773 774 6465
www.LinkingLaws.com



ಹಕ್ಕನ್ನು ರದ್ದುಗೊಳಿಸಿದ್ದು ಮತ್ತು ಬಾಕಿ ಇರುವ ಬಾಡಿಗೆ ಹಣವನ್ನು ಪಾವತಿಸಲು ಕೇಳಿಕೊಂಡಿದ್ದೆ ಎನ್ನುತ್ತಾರೆ. ವಾ.ಸಾ.1 ಮುಂದುವರಿದು ತನ್ನ ಸಾಕ್ಷಿ ಹೇಳಿಕೆಯಲ್ಲಿ ಪ್ರತಿವಾದಿಗೆ ಆ ನೋಟೀಸು ಜಾರಿಯಾಗಿದ್ದರೂ ಕೂಡ ಆತ ದಾವಾ ಕಟ್ಟಡವನ್ನು ಖಾಲಿ ಮಾಡಿ ಕೊಟ್ಟಿಲ್ಲ ಮತ್ತು ಬಾಡಿಗೆ ಬಾಕಿ ಹಣವನ್ನು ಕೊಟ್ಟಿಲ್ಲವಾದ್ದರಿಂದ ತಾನು ಈ ದಾವಾ ಮಾಡಬೇಕಾಯಿತು ಎನ್ನುತ್ತಾರೆ.

ಪ್ರತಿವಾದಿ ಪರ ವಕೀಲರು ಮಾಡಿದ ತನ್ನ ಪಾಟೀ ಸವಾಲಿನಲ್ಲಿ ವಾ.ಸಾ.1 ತಾನು ಮಾಲೀಕನಾಗಿರುವ ಅದೇ ಸಂಕೀರ್ಣದಲ್ಲಿ ಬೇರೆ ಅಂಗಡಿ ಮಳಿಗೆಗಳು ಕೂಡ ಇದ್ದು ಅವುಗಳ ಪೈಕಿ 2 ಮಳಿಗೆಗಳು ಈಗಲೂ ಖಾಲಿ ಇವೆ ಎಂದು ಒಪ್ಪಿಕೊಳ್ಳುತ್ತಾರೆ. ವಾ.ಸಾ.1 ಪ್ರತಿವಾದಿಯ ಸ್ವಾಧೀನದಲ್ಲಿರುವ ದಾವಾ ಕಟ್ಟಡದ ನಿಜವಾದ ಅಳತೆ 14 ಚ.ಮೀ. ಗಿಂತ ಕಡಿಮೆ ಇದೆ ಎನ್ನುವುದನ್ನು ನಿರಾಕರಿಸುತ್ತಾರೆ. ವಾ.ಸಾ.1 ನಿಶಾನೆ ಪಿ.1ರಲ್ಲಿ ಅಳತೆಯನ್ನು ಉದ್ದೇಶಪೂರ್ವಕವಾಗಿ ಹೆಚ್ಚಿಗೆ ಕಾಣಿಸಲಾಗಿದೆ ಎನ್ನುವ ಸೂಚನೆಯನ್ನು ನಿರಾಕರಿಸುತ್ತಾರೆ. ವಾ.ಸಾ.1 ತಾನು ಪ್ರತಿವಾದಿಯಿಂದ ಬಾಡಿಗೆ ಹಣ ಹೆಚ್ಚು ಕೊಡಬೇಕು ಎಂದು ಕೇಳಿದ್ದೆ ಮತ್ತು ಆತ ಅದನ್ನು ಪಾವತಿ ಮಾಡಲು ನಿರಾಕರಿಸದ್ದರಿಂದ ಈ ದಾವಾ ಮಾಡಿದ್ದೇನೆ ಎನ್ನುವುದನ್ನು ನಿರಾಕರಿಸಿದ್ದಾರೆ. ವಾ.ಸಾ.1 ತನ್ನ ಮಗ ಮೊಬೈಲ್ ಅಂಗಡಿಯನ್ನು ಅದೇ ಸಂಕೀರ್ಣದಲ್ಲಿರುವ ಖಾಲಿ ಮಳಿಗೆಗಳಲ್ಲಿ ಪ್ರಾರಂಭಿಸಬಹುದು ಎನ್ನುವ ಸೂಚನೆಗೆ ಆ ಮಳಿಗೆಗಳು ಮೊಬೈಲ್ ಅಂಗಡಿ ಪ್ರಾರಂಭಿಸಲು ಸೂಕ್ತ ಅಲ್ಲ ಎಂದು ಹೇಳುತ್ತಾರೆ. ವಾ.ಸಾ.1 ಪ್ರತಿವಾದಿಯು ಬಾಡಿಗೆಯನ್ನು ಪಾವತಿ ಮಾಡುತ್ತಾ ಬಂದಿದ್ದರು ಕೂಡ ತಾನು ಬಾಡಿಗೆ ರಶೀದಿಯನ್ನು ಕೊಡುತ್ತಿರಲಿಲ್ಲ ಎನ್ನುವುದನ್ನು ನಿರಾಕರಿಸುತ್ತಾರೆ.

**ವಾದಿಯು ತನ್ನ ಪರವಾಗಿ ಈ ಕೆಳಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ**

**ನಿಶಾನೆ ಪಿ.1: ಖಾತಾ ನಕಲು**

ಈ ಖಾತಾ ನಕಲು ದಾವಾ ಕಟ್ಟಡವು ವಾದಿಯ ಹೆಸರಲ್ಲಿ ಇರುವುದನ್ನು ತೋರಿಸುತ್ತದೆ ಮತ್ತು ಅದರಲ್ಲಿ ದಾವಾ ಕಟ್ಟಡದ ವಿಸ್ತೀರ್ಣವನ್ನು 20x8 ಅಡಿ ಎಂದು ಕಾಣಿಸಲಾಗಿದೆ.

**ನಿಶಾನೆ ಪಿ.2: ನೋಟೀಸು**

ಈ ನೋಟೀಸನ್ನು ವಾದಿಯು ತನ್ನ ವಕೀಲರ ಮೂಲಕ ದಿನಾಂಕ 01.11.2010ರಂದು ಕಳುಹಿಸಿ ಪ್ರತಿವಾದಿಗೆ ಬಾಡಿಗೆ ಬಾಕಿ ಹಣವಾದ ರೂ.1,00,000/–ನ್ನು ಪಾವತಿ ಮಾಡಲು ಕೇಳಿಕೊಂಡಿದ್ದರು ಮತ್ತು ಪ್ರತಿವಾದಿಯ ಬಾಡಿಗೆ ಹಕ್ಕನ್ನು ರದ್ದುಗೊಳಿಸಿ ಆ ನೋಟೀಸು ಜಾರಿಯದ 15 ದಿನಗಳ ಒಳಗಡೆ ದಾವಾ ಕಟ್ಟಡವನ್ನು ಖಾಲಿ ಮಾಡಿ ಕೊಡಲು ಕೇಳಿಕೊಂಡಿದ್ದನ್ನು.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India (UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
: 773 774 6465
www.LinkingLaws.com



**ನಿಶಾನೆ ಪಿ.3:** **ಅಂಚೆ ರಶೀದಿ**
ಈ ಅಂಚೆ ರಶೀದಿಯು ನಿಶಾನೆ ಪಿ.2 ನೋಟೀಸನ್ನು ನೊಂದಾಯಿತ ಅಂಚೆಯ ಮೂಲಕ ಪ್ರತಿವಾದಿಗೆ ದಿನಾಂಕ 01.11.2010ರಂದು ಕಳುಹಿಸಲಾಗಿದೆ ಎಂದು ತೋರಿಸುತ್ತದೆ.

**ನಿಶಾನೆ ಪಿ.4:** **ಅಂಚೆ ಹಿಂಬರಹ**
ಈ ಅಂಚೆ ಹಿಂಬರಹ ಪ್ರತಿವಾದಿಗೆ ನೊಂದಾಯಿತ ಅಂಚೆ ಕಳುಹಿಸಿದಂತ ನೋಟೀಸನ್ನು ಪ್ರತಿವಾದಿಯ ಹೆಂಡತಿಯು ಸ್ವೀಕರಿಸಿದ್ದಳು ಎಂದು ತೋರಿಸುತ್ತದೆ.

**ಪ್ರತಿವಾದಿಯ ಮೌಖಿಕ ಮತ್ತು ದಾಖಾಲಾತಿ ಸಾಕ್ಷ್ಯಗಳು**

ಪ್ರತಿವಾದಿಯು ನ್ಯಾಯಾಲಯದ ಮುಂದೆ ಪ್ರ.ಸಾ.1 ಎಂದು ಸಾಕ್ಷಿ ನುಡಿಯುತ್ತ ವಾದಿಯು ದಾವಾ ಕಟ್ಟಡದ ಮಾಲಿಕನೆಂದು ಮತ್ತು ತಾನು ತಿಂಗಳ ಬಾಡಿಗೆ ರೂ.4,000/–ರ ಪ್ರಕಾರ ಅಲ್ಲಿ ಬಾಡಿಗೆದಾರನಾಗಿ ಸ್ವಾಧೀನದಲ್ಲಿದ್ದು ಒಂದು ಆಭರಣದ ಅಂಗಡಿಯನ್ನು ನಡೆಸಿಕೊಂಡು ಬರುತ್ತಿರುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರ.ಸಾ.1 ವಾದಿಯು ಕಾಣಿಸಿದ ದಾವಾ ಕಟ್ಟಡದ ವಿಸ್ತೀರ್ಣವನ್ನು ಮತ್ತು ಬಾಡಿಗೆ ಹಕ್ಕನ್ನು ಕಾನೂನುಬದ್ಧವಾಗಿ ರದ್ದು ಮಾಡಿರುವುದನ್ನು ಮತ್ತು ಬಾಡಿಗೆ ಬಾಕಿ ಇರುವುದನ್ನು ನಿರಾಕರಿಸಿದ್ದಾರೆ. ಪ್ರ.ಸಾ.1 ಮುಂದುವರಿದು ತನ್ನ ಸಾಕ್ಷಿಯಲ್ಲಿ ದಾವಾ ಕಟ್ಟಡದ ನಿಜವಾದ ಅಳತೆ 14 ಚ.ಮೀ.ಗಿಂತಲೂ ಕಡಿಮೆ ಇರುತ್ತದೆ ಮತ್ತು ಕರ್ನಾಟಕ ಬಾಡಿಗೆ ಅಧಿನಿಯಮ 1999 ದಾವಾ ಕಟ್ಟಡಕ್ಕೆ ಅನ್ವಯವಾಗುತ್ತದೆ ಎಂದು ನುಡಿಯುತ್ತಾರೆ. ಪ್ರ.ಸಾ.1 ತನ್ನ ಸಾಕ್ಷಿ ಹೇಳಿಕೆಯಲ್ಲಿ ತನ್ನ ಬಾಡಿಗೆ ಹಕ್ಕನ್ನು ಕಾನೂನಬದ್ದವಾಗಿ ರದ್ದುಗೊಳಿಸಲಾಗಿಲ್ಲ ಎಂದು ನುಡಿಯುತ್ತಾರೆ. ಪ್ರ.ಸಾ.1 ಮುಂದುವರಿದು ತನ್ನ ಸಾಕ್ಷಿ ಹೇಳಿಕೆಯಲ್ಲಿ ತಾನು ದಾವಾ ಕಟ್ಟಡದಲ್ಲಿ ಒಂದು ಆಭರಣದ ಅಂಗಡಿಯನ್ನು ನಡೆಸಿಕೊಂಡು ಬರುತ್ತಿದ್ದು ಅದು ತನ್ನ ಜೀವನೋಪಾಯಕ್ಕೆ ಏಕೈಕ ಮೂಲವಾಗಿದ್ದು ಆತನನ್ನು ದಾವಾ ಕಟ್ಟಡದಿಂದ ಖಾಲಿ ಮಾಡಿಸಿದ್ದಲ್ಲಿ ಆತನಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ ಎಂದು ನುಡಿಯುತ್ತಾರೆ.

ಪ್ರ.ಸಾ.1 ವಾದಿ ಪರ ವಕೀಲರು ಮಾಡಿದ ತನ್ನ ಪಾಟೀ ಸವಾಲಿನಲ್ಲಿ ತಾನು ದಾವಾ ಸ್ವತ್ತಿನಲ್ಲಿ ವಾದಿಯ ಕೆಳಗೆ ಬಾಡಿಗೆದಾರನಾಗಿದ್ದು ತಿಂಗಳ ಬಾಡಿಗೆ ರೂ.4,000/– ಎಂದು ಒಪ್ಪಿಕೊಳ್ಳುತ್ತಾರೆ. ಪ್ರ.ಸಾ.1 ತಾನು ವಾದಿಗೆ ಬಾಡಿಗೆ ಹಣ ಕೊಟ್ಟಾಗಲೆಲ್ಲಾ ಆತ ಬಾಡಿಗೆ ರಶೀದಿಯನ್ನು ಕೊಟ್ಟಿದ ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರ.ಸಾ.1 ನಿಶಾನೆ ಡಿ.1 ಹೊರತುಪಡಿಸಿ ತನ್ನ ಬಳಿ ಬಾಡಿಗೆ

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ಪಾವತಿ ಮಾಡಿರುವ ಬಗ್ಗೆ ಬೇರೆ ಯಾವುದೇ ಬಾಡಿಗೆ ರಶೀದಿ ಇಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಪ್ರ.ಸಾ.1 ದಾವಾ ಕಟ್ಟಡದ ಅಳತೆ 14 ಚ.ಮೀ.ಗಿಂತ ಕಡಿಮೆ ಇದೆ ಎಂದು ತೋರಿಸಲು ತನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಪ್ರ.ಸಾ.1 ತಾನು ಮತ್ತು ತನ್ನ ಹೆಂಡತಿ ಒಟ್ಟಿಗೆ ವಾಸ ಮಾಡಿಕೊಂಡಿದ್ದು ವಾದಿಯು ಕಳುಹಿಸಿದಂತ ನೋಟೀಸನ್ನು ತನ್ನ ಹೆಂಡತಿ ಸ್ವೀಕರಿಸಿ ಅದನ್ನು ತನಗೆ ಕೊಟ್ಟಿದ್ದಳು ಎಂದು ಒಪ್ಪಿಕೊಳ್ಳತ್ತಾರೆ. ಪ್ರ.ಸಾ.1 ವಾದಿಯು ತನಗೆ ಕೊಟ್ಟ ನೋಟಿಸಿಗೆ ತಾನು ಯಾವುದೇ ಉತ್ತರವನ್ನು ಕೊಟ್ಟಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ.

<u>**ಪ್ರತಿವಾದಿಯು ತನ್ನ ಪರವಾಗಿ ಈ ಕೆಳಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ**</u>

**<u>ನಿಶಾನೆ ಡಿ.1:</u> ಬಾಡಿಗೆ ರಶೀದಿ**

ಈ ದಾಖಲೆಯು ಪ್ರತಿವಾದಿ ದಿನಾಂಕ 10.10.2008ರಂದು 2008ನೇ ಸಾಲಿನ ಜೂನ್, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ಬಾಡಿಗೆಯೆಂದು ರೂ.16,000/-ವನ್ನು ಪಾವತಿ ಮಾಡಿದ್ದ ಎಂದು ತೋರಿಸಲಾಗಿದೆ.

<u>**ವಾದಿಯ ಪರ ವಾದ**</u>

ವಾದಿಯ ಪರವಾಗಿ ಹಾಜರಾದ ಮಾನ್ಯ ವಕೀಲರು ತಮ್ಮ ವಾದದಲ್ಲಿ ದಾವಾ ಕಟ್ಟಡದ ಮೇಲಿನ ವಾದಿಯ ಮಾಲೀಕತ್ವ ಮತ್ತು ಪ್ರತಿವಾದಿಯು ತಿಂಗಳ ಬಾಡಿಗೆ ರೂ.4,000/-ರ ಪ್ರಕಾರ ಅದರಲ್ಲಿ ಬಾಡಿಗೆದಾರನಾಗಿರುವುದನ್ನು ಪ್ರತಿವಾದಿಯು ಒಪ್ಪಿಕೊಂಡಿದ್ದಾರೆ ಎಂದು ವಾದಿಸುತ್ತಾರೆ. ಮುಂದುವರಿದು ವಾದಿ ಪರ ಮಾನ್ಯ ವಕೀಲರು ತಮ್ಮ ವಾದದಲ್ಲಿ ಪ್ರತಿವಾದಿಯು ದಾವಾ ಕಟ್ಟಡದ ವಿಸ್ತೀರ್ಣ 14 ಚ.ಮೀ.ಗಿಂತ ಕಡಿಮೆ ಇದೆ ಮತ್ತು ಕರ್ನಾಟಕ ಬಾಡಿಗೆ ಅಧಿನಿಯಮ, 1999 ದಾವಾ ಕಟ್ಟಡಕ್ಕೆ ಅನ್ವಯವಾಗುತ್ತದೆ ಎಂದು ಸಾದಿಸಿದ್ದರು ಕೂಡ ಅದನ್ನು ಸಾಬೀತು ಪಡಿಸಲು ವಿಫಲರಾಗಿದ್ದಾರೆ ಎಂದು ವಾದಿಸುತ್ತಾರೆ. ವಾದಿಯು ಹಾಜರು ಪಡಿಸಿದ ನಿಶಾನೆ ಪಿ.1 ಆಸ್ತಿಯ ನಕಲು ದಾವಾ ಕಟ್ಟಡದ ಅಳತೆ 160 ಚ.ಅಡಿ ಎಂದು ಕಾಣಿಸುತ್ತದೆ ಆದುದರಿಂದ ಬಾಡಿಗೆ ಹಕ್ಕನ್ನು ರದ್ದುಪಡಿಸಿ ಸಲ್ಲಿಸಿದ ಈ ದಾವೆ ಊರ್ಜಿತವಾಗುತ್ತದೆ ಎಂದು ವಾದಿಸುತ್ತಾರೆ. ವಾದಿಯ ಪರ ಮಾನ್ಯ ವಕೀಲರು ಮುಂದುವರಿದು ಕಾನೂನು ನೋಟೀಸು, ಪ್ರತಿವಾದಿಯು ಹಾಜರಿಲ್ಲವಾದ್ದರಿಂದ ಆತನ ಪತ್ನಿಯ ಮೇಲೆ ಜಾರಿಗೊಳಿಸಲಾಗಿದ್ದು ಮತ್ತು ಪ್ರತಿವಾದಿಗೆ ಕಟ್ಟಡವನ್ನು ಖಾಲಿ ಮಾಡಲು 15 ದಿನಗಳ ಅವಕಾಶವನ್ನು ನೀಡಲಾಗಿದೆ ಆದುದರಿಂದ ಪ್ರತಿವಾದಿಯ ಬಾಡಿಗೆ ಹಕ್ಕನ್ನು ಕಾನೂನು

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ಪ್ರಕಾರವೇ ರದ್ದುಗೊಳಿಸಲಾಗಿದೆ ಎಂದು ವಾದಿಸುತ್ತಾರೆ. ಮುಂದುವರಿದು ವಾದಿ ಪರ ಮಾನ್ಯ ವಕೀಲರು ತಮ್ಮ ವಾದದಲ್ಲಿ ಪ್ರತಿವಾದಿಯು ಹಾಜರಿ ಪಡಿಸಿರುವ ದಾಖಲಾತಿಗಳ ಪ್ರಕಾರವೆ ಆತನು ಸೆಪ್ಟೆಂಬರ್ 2008ರ ವರೆಗಿನ ಬಾಡಿಗೆಯನ್ನು ಮಾತ್ರ ಪಾವತಿ ಮಾಡಿದ್ದು ಸೆಪ್ಟೆಂಬರ್ 2008ರ ನಂತರದ ಬಾಡಿಗೆಯನ್ನು ಪಾವತಿ ಮಾಡಿರುವುದನ್ನು ತೋರಿಸಲು ಯಾವುದೇ ಸಾಕ್ಷಿ ಇರುವುದಿಲ್ಲ ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ವಾದಿ ಪರ ಮಾನ್ಯ ವಕೀಲರು ದಾವಾವನ್ನು ಖರ್ಚುಸಹಿತ ಡಿಕ್ರಿ ಮಾಡಲು ಕೋರುತ್ತಾರೆ.

**ಪ್ರತಿವಾದಿಯ ಪರ ವಾದ**

ಪ್ರತಿವಾದಿ ಪರ ಮಾನ್ಯ ವಕೀಲರು ತಮ್ಮ ವಾದದಲ್ಲಿ ಆಸ್ತಿಯ ನಕಲಿನಲ್ಲಿ ಆಸ್ತಿಯ ಅಳತೆಯನ್ನು 20x8 ಅಡಿಯೆಂದು ಕಾಣಿಸಿದ್ದರು ಕೂಡ ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ಆಸ್ತಿಯ ಮೇಲ್ಭಾಯದ ನಿಜವಾದ ಅಳತೆ 14 ಚ.ಮಿ.ಗಿಂತಲು ಕಡಿಮೆ ಇರುತ್ತದೆ ಎನ್ನುತ್ತಾರೆ. ಆದುದರಿಂದ ಕರ್ನಾಟಕ ಬಾಡಿಗೆ ಅಧಿನಿಯಮ, 1999 ದಾವಾ ಕಟ್ಟಡಕ್ಕೆ ಅನ್ವಯವಾಗುತ್ತದೆ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ಮಾನ್ಯ ವಕೀಲರು ಮುಂದುವರಿದು ತಮ್ಮ ವಾದದಲ್ಲಿ ವಾದಿಯು ಕಳುಹಿಸಿದ ಕಾನೂನು ನೋಟೀಸು ಪ್ರತಿವಾದಿಗೆ ಸ್ವತಃ ಜಾರಿಯಾಗಿಲ್ಲ ಮತ್ತು ಬಾಡಿಗೆ ಹಕ್ಕನ್ನು ರದ್ದುಪಡಿಸಿ ಪ್ರತಿವಾದಿಗೆ ಕಟ್ಟಡವನ್ನು ಖಾಲಿ ಮಾಡಲು ನಿರ್ದೇಶಿಸಿದಾಗ ಸಾಕಷ್ಟು ಸಮಯವನ್ನು ಕೊಡಲಾಗಿಲ್ಲ ಎಂದು ವಾದಿಸುತ್ತಾರೆ ಆದುದರಿಂದ ಪ್ರತಿವಾದಿಯ ಬಾಡಿಗೆ ಹಕ್ಕನ್ನು ಕಾನೂನು ಪ್ರಕಾರ ರದ್ದುಪಡಿಸಲಾಗಿಲ್ಲ ಎಂದು ವಾದಿಸುತ್ತಾರೆ. ಪ್ರತಿವಾದಿ ಪರ ವಾದದಲ್ಲಿ ವಾದಿ/ವಾ.ಸಾ.1 ತನಗೆ ಬೇರೆ ಮಳಿಗೆ ಇರುವುದನ್ನು ಒಪ್ಪಿಕೊಂಡಿದ್ದು ಅದರಲ್ಲಿ ಆತನ ಮಗನು ಮೊಬೈಲ್ ಅಂಗಡಿಯನ್ನು ಪ್ರಾರಂಭಿಸಬಹುದು, ಆದುದರಿಂದ ದಾವಾ ಕಟ್ಟಡವು ವಾದಿಗೆ ಬೇಕಾಗಿರುವುದಿಲ್ಲ ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಪ್ರತಿವಾದಿ ಪರ ಮಾನ್ಯ ವಕೀಲರು ದಾವಾವನ್ನು ಖರ್ಚು ಸಹಿತ ವಜಾ ಮಾಡಲು ಕೋರಿದ್ದಾರೆ.

******

# HIGH COURT OF KARNATAKA
## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2020
## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2020

## LAW PAPER III
## ಕಾನೂನು ಪತ್ರಿಕೆ – III

**Framing of charges and writing of a Judgment in Criminal Case**
**ಅಪರಾಧ ಪ್ರಕರಣಗಳಲ್ಲಿ ಆರೋಪಣೆಗಳನ್ನು ರೂಪಿಸುವುದು ಮತ್ತು ತೀರ್ಪನ್ನು ಬರೆಯುವುದು**

Date: 29.11.2020 — Max. Marks: 100
ದಿನಾಂಕ: 29ನೇ ನವೆಂಬರ್ 2020 — ಗರಿಷ್ಠ ಅಂಕಗಳು: 100

Time: 2.30 PM to 5.30 PM
ಸಮಯ: ಮಧ್ಯಾಹ್ನ 2.30 ರಿಂದ 5.30 ಗಂಟೆ

**Instructions:**
**ಸೂಚನೆಗಳು:**

1. Option is given to the candidates to write answers either in English or in Kannada

   ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ.

2. If there is any discrepancy or difference in the questions in English language and Kannada language, the questions as framed in English language shall prevail.

   ಒಂದು ವೇಳೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಗಳಲ್ಲಿರುವ ಪ್ರಶ್ನೆಗಳ ನಡುವೆ ಯಾವುದೇ ಲೋಪ ಅಥವಾ ವ್ಯತ್ಯಾಸ ಕಂಡುಬಂದಲ್ಲಿ, ಆಂಗ್ಲ ಭಾಷೆಯಲ್ಲಿ ರೂಪಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

3. Write your register number only on the cover page in the space provided in your answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

   ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

Linking Laws
Link Life with Law
: 773 774 6465
www.LinkingLaws.com



1. **Frame proper plea in the following case.**

**Marks: 15**

**C C No.78/2015**

**Complainant:** State by Sankeshwara Police Station

And

**Accused:** Samiullah

It is alleged in the charge sheet that on 06.11.2014 at about 7.30 p.m., near Government Higher Primary School, Sankeshwar, on Sankeshwar-Nippani Road, within the jurisdiction of Sankeshwar Police Station, the accused, being the driver of a Lorry bearing Registration Number KA-25-B-2027, drove the same in a rash and negligent manner, by endangering human life and dashed the Lorry to a motor bike bearing Registration Number KA-22-M-676 coming from the opposite direction, due to which, one Shivaraju, who was the pillion rider in the motor bike, sustained fatal injuries and died on the way to the hospital and CW1 Ramesha, who was the riding the motor bike, sustained grievous injuries and the accused, after causing the accident, ran away from the spot and failed to intimate the jurisdictional police about the accident and also failed provide medical treatment to the injured. With these allegations, Police Inspector of Sankeshwar Police Station has filed charge sheet against the accused.

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India (UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

1. ಈ ಕೆಳಗಿನ ಪ್ರಕರಣದಲ್ಲಿ ಸರಿಯಾದ ಆರೋಪಣೆಯನ್ನು ರೂಪಿಸಿ: ಅಂಕಗಳು: 15

**ಸಿ.ಸಿ.ನಂ.78/2015**

ಫಿರ್ಯಾದಿ: ರಾಜ್ಯ ಸರ್ಕಾರ ಪರವಾಗಿ ಸಂಕೇಶ್ವರ ಪೋಲೀಸ್ ಠಾಣೆ

**ವಿರುದ್ದ**

ಆರೋಪಿ: ಸಮಿಉಲ್ಲಾ

ದೋಷಾರೋಪಣಾ ಪಟ್ಟಿಯಲ್ಲಿ ಆರೋಪಿಸಿದ ಪ್ರಕಾರ, ದಿನಾಂಕ 6.11.2014ರಂದು ರಾತ್ರಿ ಸುಮಾರು 7.30 ಗಂಟೆಗೆ ಸಂಕೇಶ್ವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಸಂಕೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ಸಂಕೇಶ್ವರ-ನಿಪ್ಪಾಣಿ ರಸ್ತೆಯಲ್ಲಿ ಆರೋಪಿಯು ಕೆಎ25-ಬಿ-2027 ನೊಂದಣಿ ಸಂಖ್ಯೆಯ ಲಾರಿಯ ಚಾಲಕನಾಗಿ ಅದನ್ನು ಅತಿ ವೇಗ ಮತ್ತು ಅಜಾಗರುಕತೆಯಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗುವ ರೀತಿಯಲ್ಲಿ ಚಲಾಯಿಸಿ ಆ ಲಾರಿಯನ್ನು ಮುಂಭಾಗದಿಂದ ಬರುತ್ತಿದ್ದ ಕೆಎ22-ಎಂ-676 ನೊಂದಣಿ ಸಂಖ್ಯೆಯ ಮೋಟಾರು ಬೈಕಿಗೆ ಡಿಕ್ಕಿ ಹೊಡೆದಿದ್ದು ಆ ಕಾರಣದಿಂದ ಮೋಟಾರು ಬೈಕಿನ ಹಿಂಬದಿಯಲ್ಲಿ ಕುಳಿತಿದ್ದ ಓರ್ವ ಶಿವರಾಜು ಎನ್ನುವವರಿಗೆ ಮಾರಣಾಂತಿಕವಾದ ಗಾಯಗಳಾಗಿದ್ದು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೃತಪಟ್ಟಿದ್ದು ಮತ್ತು ಮೊಟರ್ ಬೈಕ್ ಚಲಾಯಿಸುತ್ತಿದ್ದ ಸಾ.ಸಾ.1 ರಮೇಶನಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಮತ್ತು ಆರೋಪಿಯು ಅಪಘಾತದ ಬಳಿಕ ಸ್ಥಳದಿಂದ ಓಡಿ ಹೋಗಿದ್ದು, ಸಂಬಂಧಪಟ್ಟ ಪೋಲೀಸರಿಗೆ ಅಪಘಾತದ ವಿಷಯವನ್ನು ತಿಳಿಸಿಲ್ಲ ಮತ್ತು ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆಯನ್ನು ಒದಗಿಸಿ ಕೊಟ್ಟಿರುವುದಿಲ್ಲ. ಈ ಎಲ್ಲಾ ಆರೋಪಗಳೊಂದಿಗೆ ಸಂಕೇಶ್ವರ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

Scan this QR Code to Linking Laws BIOs
Linking Laws
LinkingLaws·Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

**2. Frame appropriate charge for the Trial of an accused on the basis of the following charge sheet material.**

**Marks: 15**

**C C No.407/2012**

**Complainant:** State by Beluru Town Police.

And

**Accused:** Puttaswamy.

It is alleged in the charge sheet that on 13.06.2011 at about 3.30 p.m. at Kambihalli Village, on the public Road in front of mosque, within the jurisdiction of Beluru Town Police Station, when CW1 was going towards his house, accused obstructed CW1 from proceeding further, picked up the quarrel with him, abused CW1 in filthy language and fisted CW1 with hands on his face, due to which two teeths of CW1 broken down and when CW2 tried to intervene to pacify the quarrel, accused assaulted him with hands, causing hurt and simply injuries to him and accused posed threat to kill CW1 and 2. With these allegations, Police Inspector of Beluru Town Police Station has filed charge sheet against the accused.

2. ಈ ಕೆಳಗೆ ತೋರಿಸಿದ ದೋಷಾರೋಪಣಾ ಪತ್ರದಲ್ಲಿ ಪ್ರಸ್ತಾಪಿಸಿದ ಮಾಹಿತಿಗಳ ಆಧಾರದ ಮೇಲೆ ಆರೋಪಿಯ ವಿರುದ್ಧ ದೋಷಾರೋಪಣೆ ಅಥವಾ ಆರೋಪಣೆಯನ್ನು ರೂಪಿಸಿ:

ಅಂಕಗಳು: 15

ಸಿ.ಸಿ.ಸಂಖ್ಯೆ 407/2012

ಫಿರ್ಯಾದಿ: ರಾಜ್ಯ ಸರ್ಕಾರ ಪರವಾಗಿ ಬೇಲೂರು ನಗರ ಪೋಲೀಸ್ ಠಾಣೆ

ವಿರುದ್ಧ

ಆರೋಪಿ: ಪುಟ್ಟಸ್ವಾಮಿ

ದೋಷಾರೋಪಣಾ ಪಟ್ಟಿಯಲ್ಲಿ ಆರೋಪಿಸಿದ ಪ್ರಕಾರ ದಿನಾಂಕ 13.6.2011ರಂದು ಮಧ್ಯಾಹ್ನ ಸುಮಾರು 3.30 ಗಂಟೆಗೆ ಬೇಲೂರು ನಗರ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಕಂಬಿಹಳ್ಳಿ

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ಗ್ರಾಮದ ಮಸೀದಿಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ ಚಾ.ಸಾ.1 ತನ್ನ ಮನೆ ಕಡೆಗೆ ಹೋಗುತ್ತಿರುವಾಗ ಆರೋಪಿಯು ಆತನನ್ನು ಮುಂದಕ್ಕೆ ಹೋಗದಂತೆ ತಡೆದು ಅಡ್ಡಗಟ್ಟಿ ಆತನೊಂದಿಗೆ ಜಗಳ ತೆಗೆದು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು ಕೈ ಮುಷ್ಠಿಯಿಂದ ಚಾ.ಸಾ.1 ಅವರ ಮುಖದ ಮೇಲೆ ಗುದ್ದಿದ್ದರಿಂದ ಚಾ.ಸಾ.1 ಅವರ ಎರಡು ಹಲ್ಲುಗಳು ಮುರಿದು ಬಿದ್ದದ್ದು ಚಾ.ಸಾ.2 ಜಗಳವನ್ನು ಬಿಡಿಸಲು ಬಂದಾಗ ಆರೋಪಿಯು ಆತನಿಗೆ ಕೈಗಳಿಂದ ಹೊಡೆದು ಹಲ್ಲೆ ಮಾಡಿ ಆತನಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಆರೋಪಿಯು ಚಾ.ಸಾ.1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿದ್ದನು. ಈ ಎಲ್ಲಾ ಆರೋಪಗಳೊಂದಿಗೆ ಬೇಲೂರು ನಗರ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

**3. Write a considered judgment in the following case by giving valid and cogent reasons assuming rival contentions and documents of the prosecution from the facts and evidence narrated below.**

**Marks: 70**

**JUDICIAL MAGISTRATE OF FIRST CLASS, SHIKARIPURA**

**CC No.847/2012**

**Complainant:** State by Shikaripura Town Police Station

**Vs**

**Accused:** Thilak
Aged 24 years,
S/o Krishnappa,
R/of Issuru,
Shikaripura Taluk,
Shivamogga District.

**Facts of the Case:**

In between 09.07.2012 and 12.07.2012, at Issur village, when the complainant and his family members have gone out of their dwelling house by locking the door, accused committed lurking

Linking Laws
Link Life with Law
: 773 774 6465
www.LinkingLaws.com



house trespass by entering into the house by removing the tiles and dishonestly committed the theft of cash of Rs.88,000/- and one pair of gold bangle and one gold ring, which were kept in a almariah in the bed room of their house.

On the basis of the complaint lodged by CW1 Dilip, Shikaripura Town Police have registered the FIR in Crime No.228/2012 on 15.07.2012 and the Investigating Officer proceeded to the spot, drawn the spot mahazar, recorded the statement of witnesses and arrested the accused on 19.07.2012 and recorded his voluntary statement, on the basis of which, seized one pair of gold bangle and a gold ring and an amount of Rs.30,000/- from his house and after investigation, CW8 filed the charge sheet against the accused by alleging that the accused has committed the offence punishable under Section 454 and 380 of Indian Penal Code.

The court took the cognizance of the case and accused produced before the court was enlarged on bail. A copy of the charge sheet and its enclosures were furnished to the accused. The charges were framed against the accused and he pleaded not guilty and claimed to be tried.

In order to prove the guilt of the accused, prosecution let in following evidence before the court.

**CW1 – Dilip**

CW1, who was examined as PW1, deposed that on 13.07.2012 at about 7.00 p.m. when they came back to their house at Issuru Village, after attending marriage function at Hassan, they found 3 to 4 tiles of their house were removed and there is theft of cash of

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India (UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
✆ : 773 774 6465
www.LinkingLaws.com



Rs.88,000/- and one pair of gold bangle and one gold ring kept in their house. PW1 further deposed that on 15.07.2012, he appeared before the Shikaripura Town Police Station and lodged a complaint as per Ex.P1. PW1 further deposed that on the same day, police came to his house and seen the spot and drawn the mahazar as per Ex.P2. PW1 further deposed that about 4 to 5 days later, police told him that accused was arrested and cash of Rs.30,000/- and gold bangles and ring were recovered from him and police have shown those articles to him and also the accused at the police station. PW1 has identified the cash of Rs.30,000/- as MO1, one pair of gold bangles as MO2 and one gold ring as MO3. PW1 also identified the accused before the court.

During the course of his cross examination by the counsel for the accused, PW1 admitted that he owns 15 acres of coffee estate in Sakleshpura Taluk and the accused was working as a driver under him in the said estate. PW1 denied the suggestion that he has not paid the salary to the accused and in this regard, accused has filed complaint before the Sakleshpura Police. PW1 denied the suggestion that due to the said enmity, he has lodged a false complaint alleging that there was theft in his house. PW1 admitted that there are four houses and two shops near by his house and a main road is passing in front of their house, where there is movement of vehicles and publics at all the time. PW1 admitted that apart from his family members, there are workers and maids staying in their house. PW1 denied that MO1 to 3 have not been recovered from the accused. PW1 also denied that he has handed over MO1 to 3 to the police, in order to register a false case against the accused. PW1 denied the suggestion that accused has not committed the theft in their house.

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

**CW2- Deepak**

CW2, who was examined as PW2, deposed that there was theft of cash and gold ornaments from the house of CW1 during July 2012 and in this regard, CW1 has lodged a complaint before the Shikaripura Town Police. PW2 further deposed that Shikaripura Town Police have came to the house of CW1 and drawn a mahazar in his presence as per Ex.P2. PW2 further deposed that while drawing the mahazar, police have noticed the removal of tiles of the house of CW1. PW2 further deposed that about 4 days after this incident, Shikaripura Police have asked him to come to the house of the accused at Mukthihalli village and seized the amount of Rs.30,000/-, one pair of gold bangle and one gold ring, which were kept by the accused in his house and drawn a seizure mahazar as per Ex.P3. PW2 has identified the MO1 to 3.

During the course of his cross examination, PW2 admitted that he was working as agent under CW1 for selling the coffee grown in his estate. PW2 admitted that the accused was working as a driver under CW1 in his coffee estate at Sakleshpura. PW2 denied the suggestion that regarding payment of salary to the accused, there was dispute between accused and CW1 and in this regard accused has lodged a complaint before the Sakleshpura Police against CW1. PW2 deposed that there were three bed rooms in the house of CW1. PW2 shown his inability to say from which bed room, MO1 to 3 were stolen. PW2 admitted that there were other houses adjacent to the house of the accused at Mukthihalli. PW2 shown ignorance as to who were present at the time of drawing the Ex.P2 mahazar in the house of CW1 and Ex.P3 mahazar in the house of accused. PW2 denied the suggestion that MO1 to 3 were not recovered from the

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
: 773 774 6465
www.LinkingLaws.com



house of the accused. PW2 denied the suggestion that CW1 has lodged a false complaint and in order to help him, he deposed falsely against the accused.

**CW4 – Huliyappa Gowda**

CW4, who was examined as PW3, deposed that about 3 months back, police have came to the house of the accused at Mukthihalli village, along with the accused and seized the amount of Rs.30,000/-, one pair of gold bangle and one gold ring and drawn a mahazar as per Ex.P3. PW3 has identified the accused and also MO1 to 3.

During the course of his cross examination, PW3 admitted that he is the resident of Shiralkoppa Town and Mukthihalli Village is about 10 kms from Shiralkoppa. PW3 admitted that CW1 has asked him to go with the police to Mukthihalli Village. PW3 admitted that there are about 5 to 6 houses adjacent to the house of the accused at Mukthihalli village. PW3 shown ignorance to name the person, who was present in the house of the accused while drawing the Ex.P3 mahazar. PW3 denied that he has not gone to the house of the accused and MO1 to 3 were not seized from the house of the accused in his presence and no mahazar was drawn. PW3 denied the suggestion that he has put the signature for the Ex.P3 mahazar in the Shikaripura Town Police Station.

**CW8 - Panchaksharappa**

CW8, who was examined as PW4, deposed that during the year 2011 and 2012, he was working as an Inspector of Police in the Shikaripura Town Police Station. PW4 further deposed that on

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

15.07.2012 at about 9.30 a.m. CW1 appeared before the police station and lodged a complaint as per Ex.P1, on the basis of which he has registered the FIR as per Ex.P4. PW4 further deposed that on the same day, at about 2.00 p.m. he has gone to the house of CW1 and drawn a mahazar as per Ex.P2 in the presence of CW2 and 3 and prepared a sketch of the spot as per Ex.P5. PW4 further deposed that on 16.07.2012, he continued the further investigation and recorded the statement of CW2 and 3. PW4 further deposed that on 19.07.2012 CW7 produced the accused before him with a report as per Ex.P6 and he arrested the accused and recorded his voluntary statement as per Ex.P7. PW4 further deposed that, as per his voluntary statement, accused took them to his house at Mukthihalli Village and produced an amount of Rs.30,000/- one pair of gold bangle and one gold ring, which were stolen by him from the house of CW1 and he has recovered the same by drawing the mahazar as per Ex.P3 in the presence of CW2 and 4. PW4 identified the MO1 to 3. PW4 further deposed that he produced the accused before the court on the same day and accused was remanded to the judicial custody. PW4 further deposed that on 20.07.2012 he recorded the statement of CW4 to 6 and further statement of CW1. PW4 further deposed that he continued the investigation and obtained the property extract of the house of CW1 and after completion of investigation, he filed the charge sheet against the accused.

During the course of his cross examination, PW4 shown ignorance about the dispute between the accused and CW1, regarding payment of salary to accused, when he was working as a driver under him in his coffee estate at Sakleshpura. PW4 denied the

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

suggestion that accused has not given any such voluntary statement before him. PW4 denied the suggestion that MO1 to 3 were given to him by CW1 to register a false case against the accused. PW4 denied the suggestion that they have not gone to the house of CW1 and not drawn any spot mahazar or sketch at the spot. PW4 denied the suggestion that accused has not taken him to his house and MO1 to 3 were not recovered from the house of the accused. PW4 denied the suggestion that both spot and seizure mahazars were prepared at the police station and signatures of the witnesses were obtained at the police station. PW4 denied the suggestion that at the instigation of CW1 he has registered the false case against the accused and deposed falsely before the court.

**STATEMENT OF THE ACCUSED UNDER SECTION 313 OF CODE OF CRIMINAL PROCEDURE**

All the incriminating evidence appearing against the accused was read over to him and accused denied them as false and stated that he was working as a driver under CW1 in his coffee estate at Sakleshpura and three months salary was due to him. Accused further stated that when he demanded the salary from CW1, he has not paid the same and when he complained about the same to the Sakleshpura Police, CW1 lodged a false complaint against him. Accused has produced the copy of the complaint lodged by him before the Sakleshpura Police.

**ARGUMENTS FOR THE PROSECUTION**

The learned Assistant Public Prosecutor has argued that the prosecution case is based upon the circumstantial evidence. The

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
: 773 774 6465
www.LinkingLaws.com



prosecution has to prove the two important circumstances to establish the guilt of the accused i.e. theft in the house of CW.1 and recovery of stolen article from the accused. The theft in the house of CW1 was proved with the evidence of CW1/PW1, CW2/PW2 and CW8/PW4 and also corroborated with spot mahazar as per Ex.P2 and spot sketch as per Ex.P5. The second and important circumstances of recovery of stolen articles from the accused is also proved by the prosecution with the evidence of CW2/PW2 and CW4/PW3. Said recovery is made in pursuance to the voluntary statement given by the accused as per Ex.P7. It was further argued that though all these witnesses were cross examined by the learned counsel for the accused, no material aspects were brought out from their cross examination. It was further argued by the learned Assistant Public Prosecutor that the evidence let in by the prosecution is free from any infirmities and would establish the case of the prosecution beyond all reasonable doubt. Therefore, the learned Assistant Public Prosecutor prayed to convict the accused.

**ARGUMENTS FOR THE ACCUSED**

The learned counsel for the accused argued that evidence let in by the prosecution is full of material contradictions, variations and discrepancies. It was further argued that there is enmity between the accused and CW1 regarding payment of salary, as admittedly the accused was working as a driver under CW1 in his coffee estate. Because of the said enmity, CW1 has lodged a false complaint against the accused. It was further argued by the Learned counsel for the accused that the prosecution witnesses are all interested witnesses and though independent witnesses were available, the

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

Linking Laws
Link Life with Law
: 773 774 6465
www.LinkingLaws.com



Investigating Officer has secured only the friends and agent of CW1 as witness for the spot and seizure mahazar. It was further argued by the Counsel for the accused that there is no direct evidence to prove the guilt of the accused and evidence let in by the prosecution miserably failed to connect the circumstances to bring home the guilt of the accused. On all these grounds, learned counsel for the accused prayed to acquit the accused by extending the benefit of doubt to him.

**3. ಈ ಕೆಳಗಿನ ಸಂಗತಿ ಮತ್ತು ಸಾಕ್ಷ್ಯಗಳಿಂದ ಉಭಯ ಪಕ್ಷಗಾರರ ವಾದ ಮತ್ತು ಅಭಿಯೋಜನೆಯ ದಾಖಲಾತಿಗಳನ್ನು ಭಾವಿಸಿಕೊಂಡು ಸಮಂಜಸ ಮತ್ತು ತರ್ಕಬದ್ಧ ಸಮರ್ಥನಾಂಶಗಳನ್ನು ನೀಡಿ ತೀರ್ಪನ್ನು ಬರೆಯಿರಿ.**

**ಅಂಕಗಳು: 70**

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶಿಕಾರಿಪುರ</u>

<u>ಸಿ.ಸಿ.ನಂ.847/2012</u>

ಫಿರ್ಯಾದುದಾರ: ಕರ್ನಾಟಕ ಸರ್ಕಾರ
ಪ್ರತಿನಿಧಿಸುವವರು: ಶಿಕಾರಿಪುರ ನಗರ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ: ತಿಲಕ್, ವಯಸ್ಸು 24 ವರ್ಷ
ತಂದೆ ಕೃಷ್ಣಪ್ಪ
ವಾಸ: ಇಸೂರು,
ಶಿಕಾರಿಪುರ ತಾಲೂಖು,
ಶಿವಮೊಗ್ಗ ಜಿಲ್ಲೆ.

**<u>ಪ್ರಕರಣದ ಸಂಗತಿಗಳು:</u>**

ದಿನಾಂಕ 09.07.2012 ಮತ್ತು 12.07.2012ರ ನಡುವೆ ಇಸೂರು ಗ್ರಾಮದಲ್ಲಿ ಫಿರ್ಯಾದಿ ಮತ್ತು ಆತನ ಕುಟುಂಬದ ಸದಸ್ಯರು ತಮ್ಮ ವಾಸದ ಮನೆಗೆ ಬೀಗ ಹಾಕಿ ಹೊರಗಡೆ ಹೋಗಿದ್ದಾಗ ಆರೋಪಿಯು ಆ ಮನೆಗೆ ಕನ್ನ ಹಾಕಿ ಮನೆಯ ಹೆಂಚನ್ನು ತೆಗೆದು ಒಳಗೆ ನುಗ್ಗಿ ಮನೆಯ ಬೆಡ್

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

Linking Laws
Link Life with Law
: 773 774 6465
www.LinkingLaws.com



ರೂಮಿನ ಕಪಾಟಿನಲ್ಲಿ ಇದ್ದ ರೂ.88,000/- ನಗದು ಹಣ, ಒಂದು ಜೊತೆ ಬಂಗಾರದ ಬಳೆ ಮತ್ತು ಒಂದು ಬಂಗಾರದ ಉಂಗುರವನ್ನು ಕಳವು ಮಾಡಿದ್ದನು.

ಚಾ.ಸಾ.1 ದಿಲೀಪ್ ಸಲ್ಲಿಸಿದ ಫಿರ್ಯಾದಿಯ ಆಧಾರದ ಮೇಲೆ ಶಿಕಾರಿಪುರ ನಗರ ಪೋಲೀಸರು ಪ್ರಕರಣ ಸಂಖ್ಯೆ 228/2012ರಲ್ಲಿ ದಿನಾಂಕ 15.07.2012ರಂದು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖಾಧಿಕಾರಿಯವರು ಘಟನಾ ಸ್ಥಳಕ್ಕೆ ಹೋಗಿ ಸ್ಥಳ ಮಹಜರನ್ನು ನಡೆಸಿ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡು ದಿನಾಂಕ 19.07.2012ರಂದು ಆರೋಪಿಯನ್ನು ದಸ್ತಗಿರಿ ಮಾಡಿ ಆತನ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿ ಅದರ ಪ್ರಕಾರ ಆತನ ಮನೆಯಿಂದ ಒಂದು ಜೊತೆ ಬಂಗಾರದ ಬಳೆ, ಒಂದು ಬಂಗಾರದ ಉಂಗುರ ಮತ್ತು ರೂ.30,000/- ನಗದು ಹಣವನ್ನು ಜಪ್ತು ಮಾಡಿ ತನಿಖೆಯನ್ನು ಪೂರೈಸಿ, ಚಾ.ಸಾ.8 ರವರು ಆರೋಪಿಯ ವಿರುದ್ಧ ಆರೋಪಿಯು ಭಾರತೀಯ ದಂಡ ಸಂಹಿತೆಯ ಕಲಂ 454 ಮತ್ತು 380ರ ಅಡಿಯಲ್ಲಿ ಅಪರಾಧವೆಸಗಿದ್ದಾನೆ ಎಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು.

ನ್ಯಾಯಾಲಯವು ಆರೋಪದ ಸಂಜ್ಞೆಯನ್ನು ತೆಗೆದುಕೊಂಡು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿತ್ತು. ದೋಷಾರೋಪಣಾ ಪಟ್ಟಿ ಮತ್ತು ಅದರೊಂದಿಗೆ ಲಗ್ತಿಕರಿಸಿದ ದಾಖಲೆಗಳ ಪ್ರತಿಗಳನ್ನು ಆರೋಪಿಗೆ ನೀಡಲಾಯಿತು. ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ರಚಿಸಿದಾಗ ಆರೋಪಿಯು ತಾನು ತಪ್ಪು ಮಾಡಿಲ್ಲ ಮತ್ತು ವಿಚಾರಣೆ ಆಗಬೇಕು ಎಂದು ಕೇಳಿಕೊಂಡಿದ್ದನು.

ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ನ್ಯಾಯಾಲಯದ ಮುಂದೆ ಈ ಕೆಳಗಿನ ಸಾಕ್ಷ್ಯವನ್ನು ನೀಡಿರುತ್ತದೆ.

**ಚಾ.ಸಾ.1 – ದಿಲೀಪ್**

ಚಾ.ಸಾ.1 ಪ್ರಾ.ಸಾ.1 ಎಂದು ಸಾಕ್ಷಿ ನುಡಿಯುತ್ತಾ ದಿನಾಂಕ 13.7.2012ರಂದು ಸಂಜೆ ಸುಮಾರು 7.00 ಗಂಟೆಗೆ ಹಾಸನದಲ್ಲಿದ್ದ ಒಂದು ಮದುವೆ ಸಮಾರಂಭಕ್ಕೆ ಹಾಜರಾಗಿ ಇಸೂರು ಗ್ರಾಮದಲ್ಲಿರುವ ತಮ್ಮ ಮನೆಗೆ ವಾಪಸ್ಸು ಬಂದಾಗ ಅವರ ಮನೆಯ ಮೂರರಿಂದ ನಾಲ್ಕು ಹೆಂಚುಗಳು ತೆಗೆದಿದ್ದು ಕಂಡು ಬಂದವು ಮತ್ತು ಅವರ ಮನೆಯಲ್ಲಿ ಇದ್ದಂತಹ ರೂ.88,000/-

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ನಗದು ಹಣ, ಒಂದು ಜೊತೆ ಬಂಗಾರದ ಬಳೆ ಮತ್ತು ಒಂದು ಬಂಗಾರದ ಉಂಗುರ ಕಳವಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.1 ಮುಂದುವರಿದು ದಿನಾಂಕ 15.07.2012ರಂದು ಅವರು ಶಿಕಾರಿಪುರ ನಗರ ಪೋಲೀಸ್ ಠಾಣೆಯ ಮುಂದೆ ಹಾಜರಾಗಿ ನಿಶಾನೆ ಪಿ.1 ರಂತೆ ಒಂದು ಫಿರ್ಯಾದಿಯನ್ನು ದಾಖಲು ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.1 ಮುಂದುವರಿದು ಅದೇ ದಿನ ಪೋಲೀಸರು ಅವರ ಮನೆಗೆ ಬಂದು ಸ್ಥಳವನ್ನು ಪರಿಶೀಲಿಸಿ ನಿಶಾನೆ ಪಿ.2 ರಂತೆ ಒಂದು ಮಹಜರನ್ನು ಮಾಡಿದ್ದರು ಎಂದು ನುಡಿಯುತ್ತಾರೆ. ಪ್ರಾ.ಸಾ.1 ಮುಂದುವರಿದು ತಮ್ಮ ಸಾಕ್ಷಿಯಲ್ಲಿ ಸುಮಾರು ನಾಲ್ಕರಿಂದ ಐದು ದಿನಗಳ ನಂತರ ಪೋಲೀಸರು ಆರೋಪಿಯನ್ನು ಬಂಧಿಸಿರುವುದಾಗಿ ಮತ್ತು ಆತನಿಂದ ನಗದು ರೂ.30,000/–, ಬಂಗಾರದ ಬಳೆಗಳು ಮತ್ತು ಉಂಗುರವನ್ನು ಅಮಾನತ್ತು ಪಡಿಸಿಕೊಂಡಿದ್ದಾಗಿ ಹೇಳಿ ಆ ವಸ್ತುಗಳನ್ನು ಮತ್ತು ಆರೋಪಿಯನ್ನು ಪೋಲೀಸ್ ಠಾಣೆಯಲ್ಲಿ ಆತನಿಗೆ ತೋರಿಸಿದ್ದಾಗಿ ನುಡಿಯುತ್ತಾರೆ. ಪ್ರಾ.ಸಾ.1 ಅವುಗಳನ್ನು ಗುರುತಿಸಿದ್ದು ನಗದು ರೂ.30,000/–ವನ್ನು ಮುದ್ದೆ ಮಾಲು 1 ಎಂದು ಒಂದು ಜೊತೆ ಬಂಗಾರದ ಬಳೆಗಳನ್ನು ಮುದ್ದೆ ಮಾಲು 2 ಎಂದು ಮತ್ತು ಒಂದು ಬಂಗಾರದ ಉಂಗುರವನ್ನು ಮುದ್ದೆ ಮಾಲು 3 ಎಂದು ಗುರುತಿಸಲಾಗಿದೆ. ಪ್ರಾ.ಸಾ.1 ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಕೂಡ ಗುರುತಿಸಿದ್ದಾರೆ.

ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲಿನಲ್ಲಿ ಪ್ರಾ.ಸಾ.1 ತನಗೆ ಸಕಲೇಶಪುರ ತಾಲೂಕಿನಲ್ಲಿ 15 ಎಕರೆ ಕಾಫಿ ತೋಟ ಇರುವುದಾಗಿ ಮತ್ತು ಆರೋಪಿಯು ಆತನ ಕೈ–ಕೆಳಗೆ ಆ ತೋಟದಲ್ಲಿ ಚಾಲಕನೆಂಬುದಾಗಿ ಕೆಲಸ ಮಾಡುತ್ತಿರುವುದಾಗಿ ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.1 ಆರೋಪಿಗೆ ತಾನು ಸಂಬಳವನ್ನು ಕೊಟ್ಟಿಲ್ಲ ಮತ್ತು ಈ ಬಗ್ಗೆ ಆರೋಪಿಯು ಸಕಲೇಶಪುರ ಪೋಲೀಸರ ಮುಂದೆ ದೂರು ಕೊಟ್ಟಿರುವುದನ್ನು ನಿರಾಕರಿಸುತ್ತಾರೆ. ಪ್ರಾ.ಸಾ.1 ಆ ವೈರತ್ವದ ಕಾರಣ ತಾನು ತನ್ನ ಮನೆಯಲ್ಲಿ ಕಳ್ಳತನವಾಗಿದೆ ಎಂದು ಸುಳ್ಳು ದೂರನ್ನು ದಾಖಲಿಸಿದ್ದೆ ಎನ್ನುವುದನ್ನು ನಿರಾಕರಿಸುತ್ತಾರೆ. ಪ್ರಾ.ಸಾ.1 ತನ್ನ ಮನೆಯ ಬಳಿ ನಾಲ್ಕು ಮನೆಗಳು ಮತ್ತು ಎರಡು ಅಂಗಡಿಗಳು ಇರುವುದನ್ನು ಮತ್ತು ಮನೆಯ ಮುಂಭಾಗದಲ್ಲಿ ಒಂದು ಮುಖ್ಯ ರಸ್ತೆ ಹಾದು ಹೋಗಿರುವುದನ್ನು ಮತ್ತು ಆ ರಸ್ತೆಯಲ್ಲಿ ಯಾವಾಗಲೂ ವಾಹನ ಮತ್ತು ಜನ ಸಂಚಾರ ಇರುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.1 ತನ್ನ ಮನೆಯಲ್ಲಿ ತನ್ನ ಕುಟುಂಬ ಸದ್ಯಸರ ಹೊರತಾಗಿ ಕೆಲಸದವರು ಮತ್ತು ಆಳುಗಳು ಕೂಡ ಇರುತ್ತಾರೆ ಎಂದು ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.1 ಮುದ್ದೆ ಮಾಲು 1 ರಿಂದ 3 ಆರೋಪಿಯಿಂದ ಅಮಾನತ್ತು ಪಡಿಸಿಕೊಂಡಿಲ್ಲ ಎನ್ನುವುದನ್ನು ನಿರಾಕರಿಸುತ್ತಾರೆ. ಪ್ರಾ.ಸಾ.1 ಆರೋಪಿಯ ವಿರುದ್ಧ ಸುಳ್ಳು ಪ್ರಕರಣ

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ದಾಖಲಿಸಲು ತಾನು ಮುದ್ದೆ ಮಾಲು 1 ರಿಂದ 3ರನ್ನು ಪೋಲೀಸರಿಗೆ ಕೊಟ್ಟಿದ್ದೆ ಎನ್ನುವುದನ್ನು ಕೂಡ ನಿರಾಕರಿಸುತ್ತಾರೆ. ಪ್ರಾ.ಸಾ.1 ಆರೋಪಿಯು ತನ್ನ ಮನೆಯಲ್ಲಿ ಕಳ್ಳತನ ಮಾಡಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸುತ್ತಾರೆ.

<u>ಚಾ.ಸಾ.2 – ದೀಪಕ್</u>

ಚಾ.ಸಾ.2 ಪ್ರಾ.ಸಾ.2 ಎಂದು ಸಾಕ್ಷಿ ನುಡಿಯುತ್ತ ಜುಲೈ 2012ರಲ್ಲಿ ಚಾ.ಸಾ.1 ರವರ ಮನೆಯಲ್ಲಿ ನಗದು ಹಣ ಮತ್ತು ಬಂಗಾರದ ಒಡವೆಗಳು ಕಳ್ಳತನವಾಗಿದ್ದು ಈ ಬಗ್ಗೆ ಚಾ.ಸಾ.1 ರವರು ಶಿಕಾರಿಪುರ ನಗರ ಪೋಲೀಸರ ಮುಂದೆ ಒಂದು ದೂರು ದಾಖಲಿಸಿದ್ದರು ಎನ್ನುತ್ತಾರೆ. ಪ್ರಾ.ಸಾ.2 ಮುಂದುವರಿದು ಶಿಕಾರಿಪುರ ನಗರ ಪೋಲೀಸರು ಚಾ.ಸಾ.1 ರವರ ಮನೆಗೆ ಬಂದು ತನ್ನ ಸಮಕ್ಷಮ ನಿಶಾನೆ ಪಿ.2 ರಂತೆ ಒಂದು ಮಹಜರನ್ನು ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.2 ಮುಂದುವರಿದು ಆ ಮಹಜರು ಮಾಡುವ ಕಾಲಕ್ಕೆ ಪೋಲೀಸರು ಚಾ.ಸಾ.1 ರವರ ಮನೆಯ ಹೆಂಚುಗಳನ್ನು ತೆಗೆದಿರುವುದನ್ನು ಗಮನಿಸಿದ್ದರು ಎನ್ನುತ್ತಾರೆ. ಪ್ರಾ.ಸಾ.2 ಮುಂದುವರಿದು ಈ ಘಟನೆಯಾದ ಸುಮಾರು 4 ದಿನಗಳ ನಂತರ ಶಿಕಾರಿಪುರ ಪೋಲೀಸರು ಮುಕ್ತಿಹಳ್ಳಿ ಗ್ರಾಮದಲ್ಲಿರುವ ಆರೋಪಿಯ ಮನೆಗೆ ಬರಬೇಕು ಎಂದು ನನಗೆ ಹೇಳಿ ಆರೋಪಿ ತನ್ನ ಮನೆಯಲ್ಲಿ ಇದ್ದ ರೂ.30,000/– ನಗದು ಹಣ, ಒಂದು ಜೊತೆ ಬಂಗಾರದ ಬಳೆ ಮತ್ತು ಒಂದು ಬಂಗಾರದ ಉಂಗುರವನ್ನು ಅಮಾನತ್ತು ಪಡಿಸಿಕೊಂಡು ನಿಶಾನೆ ಪಿ.3 ರಂತೆ ಒಂದು ಅಮಾನತ್ತು ಮಹಜರನ್ನು ಮಾಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.2 ಮುದ್ದೆ ಮಾಲು 1 ರಿಂದ 3ನ್ನು ಗುರುತಿಸುತ್ತಾರೆ.

ಪ್ರಾ.ಸಾ.2 ತಮ್ಮ ಪಾಟೀ ಸವಾಲಿನಲ್ಲಿ ತಾನು ಚಾ.ಸಾ.1 ರವರ ತೋಟದಲ್ಲಿ ಬೆಳೆಯುವ ಕಾಫಿಯನ್ನು ಮಾರಾಟ ಮಾಡುವ ಏಜೆಂಟ್ ಎಂದು ಚಾ.ಸಾ.1ರವರ ಕೈ–ಕೆಳಗೆ ಕೆಲಸ ಮಾಡುತ್ತಿರುವುದಾಗಿ ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.2 ಆರೋಪಿಯು ಸಕಲೇಶಪುರದಲ್ಲಿರುವ ಚಾ.ಸಾ.1 ರವರ ಕಾಫಿ ತೋಟದಲ್ಲಿ ಚಾಲಕನೆಂಬುದಾಗಿ ಕೆಲಸ ಮಾಡುತ್ತಿರುವುದನ್ನು ಒಪ್ಪಿಕೊಂಡಿರುತ್ತಾರೆ. ಪ್ರಾ.ಸಾ.2 ಆರೋಪಿ ಮತ್ತು ಚಾ.ಸಾ.1 ರವರ ನಡುವೆ ಸಂಬಳ ಪಾವತಿಯ ಬಗ್ಗೆ ತಕರಾರು ಇದೆ ಮತ್ತು ಈ ಬಗ್ಗೆ ಆರೋಪಿಯು ಚಾ.ಸಾ.1 ರವರ ವಿರುದ್ಧ ಸಕಲೇಶಪುರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.2 ಚಾ.ಸಾ.1 ರವರ


Linking Laws is a Professional Institute provide
AI based Smart Preparation for
Judicial Service Exams & other Law Related Exam in India
*(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)*

ಮನೆಯಲ್ಲಿ ಮೂರು ಬೆಡ್ ರೂಂಗಳು ಇವೆ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.2 ಮುದ್ದೆ ಮಾಲು 1 ರಿಂದ 3 ಯಾವ ಬೆಡ್ ರೂಮಿನಿಂದ ಕಳವಾಗಿದ್ದು ಎಂದು ಹೇಳಲು ತನಗೆ ಆಗುವುದಿಲ್ಲಲ ಎಂದು ಹೇಳಿದ್ದಾರೆ. ಪ್ರಾ.ಸಾ.2 ಮುಕ್ತಿಹಳ್ಳಿಯಲ್ಲಿರುವ ಆರೋಪಿಯ ಮನೆಯ ಪಕ್ಕ ಬೇರೆ ಮನೆಗಳಿರುವುದನ್ನು ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.2 ನಿಶಾನೆ ಪಿ.2 ಮಹಜರನ್ನು ಮಾಡುವ ಕಾಲಕ್ಕೆ ಚಾ.ಸಾ.1 ರವರ ಮನೆಯಲ್ಲಿ ಮತ್ತು ನಿಶಾನೆ ಪಿ.3 ಮಹಜರ್ ಮಾಡುವ ಕಾಲಕ್ಕೆ ಆರೋಪಿಯ ಮನೆಯಲ್ಲಿ ಯಾರೆಲ್ಲ ಹಾಜರಿದ್ದರು ಎಂದು ತನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಪ್ರಾ.ಸಾ.2 ಮುದ್ದೆ ಮಾಲು 1 ರಿಂದ 3 ಆರೋಪಿಯ ಮನೆಯಿಂದ ಜಪ್ತು ಮಾಡಲಾಗಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.2 ಚಾ.ಸಾ.1 ರವರು ಒಂದು ಸುಳ್ಳು ಫಿರ್ಯಾದಿಯನ್ನು ದಾಖಲೆ ಮಾಡಿದ್ದಾರೆ ಮತ್ತು ಆತನಿಗೆ ಸಹಾಯ ಮಾಡಲು ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ.

**ಚಾ.ಸಾ.4 – ಹುಲಿಯಪ್ಪ ಗೌಡ**

ಚಾ.ಸಾ.4 ಪ್ರಾ.ಸಾ.3 ಎಂದು ಸಾಕ್ಷಿ ನುಡಿಯುತ್ತಾ ಈಗ್ಗೆ ಸುಮಾರು 3 ತಿಂಗಳ ಹಿಂದೆ ಪೋಲೀಸರು ಮುಕ್ತಿಹಳ್ಳಿ ಗ್ರಾಮದಲ್ಲಿರುವ ಆರೋಪಿಯ ಮನೆಗೆ ಆರೋಪಿಯೊಂದಿಗೆ ಬಂದಿದ್ದರು ಮತ್ತು ರೂ.30,000/- ನಗದು ಹಣ, ಒಂದು ಜೊತೆ ಬಂಗಾರದ ಬಳೆ ಮತ್ತು ಒಂದು ಬಂಗಾರದ ಉಂಗುರವನ್ನು ಅಮಾನತ್ತು ಪಡಿಸಿಕೊಂಡು ನಿಶಾನೆ ಪಿ.3 ರಂತೆ ಒಂದು ಮಹಜರನ್ನು ಮಾಡಿದ್ದರು ಎನ್ನುತ್ತಾರೆ. ಪ್ರಾ.ಸಾ.3 ಆರೋಪಿಯನ್ನು ಮತ್ತು ಮುದ್ದೆ ಮಾಲು 1 ರಿಂದ 3ನ್ನು ಗುರುತಿಸಿದ್ದಾರೆ.

ತಮ್ಮ ಪಾಟೀ ಸವಾಲಿನಲ್ಲಿ ಪ್ರಾ.ಸಾ.3 ತಾನು ಶಿರಾಳಕೊಪ್ಪ ಟೌನಿನ ನಿವಾಸಿಯಾಗಿದ್ದು ಮುಕ್ತಿಹಳ್ಳಿ ಗ್ರಾಮವು ಶಿರಾಳಕೊಪ್ಪದಿಂದ ಸುಮಾರು 10 ಕಿ.ಮೀ. ದೂರದಲ್ಲಿದೆ ಎಂದು ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.3 ತನಗೆ ಚಾ.ಸಾ.1 ಪೋಲೀಸರೊಂದಿಗೆ ಮುಕ್ತಿಹಳ್ಳಿ ಗ್ರಾಮಕ್ಕೆ ಹೋಗಲು ಹೇಳಿದ್ದರು ಎಂದು ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.3 ಮುಕ್ತಿಹಳ್ಳಿ ಗ್ರಾಮದಲ್ಲಿರುವ ಆರೋಪಿಯ ಮನೆಯ ಅಕ್ಕಪಕ್ಕ 5 ರಿಂದ 6 ಮನೆಗಳು ಇವೆ ಎಂದು ಒಪ್ಪಿಕೊಳ್ಳುತ್ತಾರೆ. ಪ್ರಾ.ಸಾ.3 ನಿಶಾನೆ ಪಿ.3 ಮಹಜರನ್ನು ಮಾಡುವ ಕಾಲಕ್ಕೆ ಆರೋಪಿಯ ಮನೆಯಲ್ಲಿದ್ದ ವ್ಯಕ್ತಿಯ ಹೆಸರನ್ನು ಹೇಳಲು ತನಗೆ ಆಗುವುದಿಲ್ಲ ಎನ್ನುತ್ತಾರೆ. ಪ್ರಾ.ಸಾ.3 ತಾನು ಆರೋಪಿಯ ಮನೆಗೆ ಹೋಗಿಲ್ಲ ಮತ್ತು ಮುದ್ದೆ ಮಾಲು 1 ರಿಂದ 3ಗಳನ್ನು ಆರೋಪಿಯ ಮನೆಯಿಂದ ತನ್ನ ಸಮಕ್ಷಮ ಜಪ್ತಿ ಮಾಡಿಲ್ಲ ಮತ್ತು ಯಾವುದೇ

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

ಮಹಜರನ್ನು ಮಾಡಿಲ್ಲ ಎನ್ನುವುದನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.3 ತಾನು ನಿಶಾನೆ ಪಿ.3 ಮಹಜರಿಗೆ ಶಿಕಾರಿಪುರ ನಗರ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದ ಎನ್ನುವುದನ್ನು ನಿರಾಕರಿಸಿದ್ದಾರೆ.

<u>ಚಾ.ಸಾ.8 – ಪಂಚಾಕ್ಷರಪ್ಪ</u>

ಚಾ.ಸಾ.8 ಪ್ರಾ.ಸಾ.4 ಎಂದು ಸಾಕ್ಷಿ ನುಡಿಯುತ್ತಾ 2011 ಮತ್ತು 2012ನೇ ಸಾಲಿನಲ್ಲಿ ತಾನು ಶಿಕಾರಿಪುರ ನಗರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂದು ನುಡಿಯುತ್ತಾರೆ. ಪ್ರಾ.ಸಾ.4 ಮುಂದುವರಿದು ದಿನಾಂಕ 15.07.2012ರಂದು ಬೆಳಗ್ಗೆ ಸುಮಾರು 9.30 ಗಂಟೆಗೆ ಚಾ.ಸಾ.1 ರವರು ಪೋಲೀಸ್ ಠಾಣೆಗೆ ಹಾಜರಾಗಿ ನಿಶಾನೆ ಪಿ.1 ರಂತೆ ಕೊಟ್ಟಂತಹ ದೂರಿನ ಆಧಾರದ ಮೇಲೆ ತಾನು ನಿಶಾನೆ ಪಿ.4ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಪ್ರಾ.ಸಾ.4 ಮುಂದುವರಿದು ಅದೇ ದಿನ ಮಧ್ಯಾಹ್ನ 2 ಗಂಟೆಗೆ ತಾನು ಚಾ.ಸಾ.1 ರವರ ಮನೆಗೆ ಹೋಗಿ ಚಾ.ಸಾ.2 ಮತ್ತು 3 ಇವರ ಸಮಕ್ಷಮ ನಿಶಾನೆ ಪಿ.2ರಂತೆ ಒಂದು ಮಹಜರನ್ನು ಮಾಡಿರುತ್ತೇನೆ ಮತ್ತು ನಿಶಾನೆ ಪಿ.5ರಂತೆ ಒಂದು ಸ್ಥಳದ ನಕಾಶೆಯನ್ನು ತಯಾರಿಸಿದ್ದೇನೆ ಎನ್ನುತ್ತಾರೆ. ಪ್ರಾ.ಸಾ.4 ಮುಂದುವರಿದು ದಿನಾಂಕ 16.07.2012ರಂದು ತಾನು ತನಿಖೆಯನ್ನು ಮುಂದುವರಿಸಿ ಚಾ.ಸಾ.2 ಮತ್ತು 3 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎನ್ನುತ್ತಾರೆ. ಪ್ರಾ.ಸಾ.4 ಮುಂದುವರಿದು ದಿನಾಂಕ 19.07.2012ರಂದು ಚಾ.ಸಾ.7 ರವರು ನಿಶಾನೆ ಪಿ.6 ವರದಿಯೊಂದಿಗೆ ಆರೋಪಿಯನ್ನು ತನ್ನ ಮುಂದೆ ಹಾಜರು ಪಡಿಸಿದ್ದು, ತಾನು ಆರೋಪಿಯನ್ನು ದಸ್ತಗಿರಿ ಮಾಡಿ ಆತ ನೀಡಿದ ಸ್ವ-ಇಚ್ಛಾ ಹೇಳಿಕೆಯನ್ನು ನಿಶಾನೆ ಪಿ.7ರಂತೆ ದಾಖಲು ಮಾಡಿದ್ದೆ ಎಂದು ನುಡಿಯುತ್ತಾರೆ. ಪ್ರಾ.ಸಾ.4 ಮುಂದುವರಿದು ಆರೋಪಿಯು ತಾನು ಕೊಟ್ಟ ಸ್ವ-ಇಚ್ಛಾ ಹೇಳಿಕೆಯಂತೆ ತಮ್ಮನ್ನು ಮುಕ್ತಿಹಳ್ಳಿ ಗ್ರಾಮದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ ತಾನು ಚಾ.ಸಾ.1 ರವರ ಮನೆಯಿಂದ ಕಳವು ಮಾಡಿದ ರೂ.30,000/- ನಗದು ಹಣ, ಒಂದು ಜೊತೆ ಬಂಗಾರದ ಬಳೆ ಮತ್ತು ಒಂದು ಬಂಗಾರದ ಉಂಗುರವನ್ನು ಹಾಜರು ಪಡಿಸಿದ್ದು ತಾನು ಅವುಗಳನ್ನು ಚಾ.ಸಾ.2 ಮತ್ತು 4ರವರ ಸಮಕ್ಷಮ ನಿಶಾನೆ ಪಿ.3 ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿದ್ದೆ ಎಂದು ನುಡಿಯುತ್ತಾರೆ. ಪ್ರಾ.ಸಾ.4 ಮುಂದುವರಿದು ಅದೇ ದಿನ ತಾನು ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಯಿತು ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.4 ಮುಂದುವರಿದು ದಿನಾಂಕ 20.07.2012ರಂದು ತಾನು ಚಾ.ಸಾ.4 ರಿಂದ 6 ಇವರ ಹೇಳಿಕೆಗಳನ್ನು ಮತ್ತು ಚಾ.ಸಾ.1 ಇವರ

ಮರುಹೇಳಿಕೆಯನ್ನು ಪಡೆದುಕೊಂಡಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಪ್ರಾ.ಸಾ.4 ಮುಂದುವರಿದು ತಾನು ತನಿಖೆಯನ್ನು ಮುಂದುವರಿಸಿ ಚಾ.ಸಾ.1 ರವರ ಮನೆಯ ಆಸ್ತಿಯ ನಕಲನ್ನು ಪಡೆದುಕೊಂಡು ತನಿಖೆಯನ್ನು ಪೂರೈಸಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ.

ಪ್ರಾ.ಸಾ.4 ತನ್ನ ಪಾಟೀ ಸವಾಲಿನಲ್ಲಿ ಆರೋಪಿಯು ಚಾ.ಸಾ.1 ರವರಿಗೆ ಸೇರಿದ ಸಕಲೇಶಪುರದ ಕಾಫಿ ಎಸ್ಟೇಟಿನಲ್ಲಿ ಡ್ರೈವರ್ ಎಂದು ಕೆಲಸ ಮಾಡುತ್ತಿದ್ದಾಗ ಆರೋಪಿಗೆ ಸಂಬಳ ಪಾವತಿ ಮಾಡುವ ವಿಚಾರದಲ್ಲಿ ಆರೋಪಿ ಮತ್ತು ಚಾ.ಸಾ.1 ರವರ ನಡುವೆ ತಕರಾರು ಇತ್ತು ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರಾ.ಸಾ.4 ಆರೋಪಿಯು ತನ್ನ ಮುಂದೆ ಯಾವುದೇ ಸ್ವ-ಇಚ್ಛಾ ಹೇಳಿಕೆಯನ್ನು ಕೊಟ್ಟಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.4 ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಲು ಚಾ.ಸಾ.1 ತನಗೆ ಮುದ್ದೆ ಮಾಲು 1 ರಿಂದ 3ನ್ನು ಕೊಟ್ಟಿದ್ದರು ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.4 ತಾವು ಚಾ.ಸಾ.1 ರವರ ಮನೆಗೆ ಹೋಗಿಲ್ಲ ಮತ್ತು ಅಲ್ಲಿ ಯಾವುದೇ ಸ್ಥಳ ಮಹಜರನ್ನು ಮತ್ತು ನಕಾಶೆಯನ್ನು ತಯಾರಿಸಿಲ್ಲ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.4 ಆರೋಪಿಯು ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿಲ್ಲ ಮತ್ತು ಮುದ್ದೆ ಮಾಲು 1 ರಿಂದ 3ನ್ನು ಆರೋಪಿಯ ಮನೆಯಿಂದ ಅಮಾನತ್ತು ಪಡಿಸಲಾಗಿಲ್ಲ ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.4 ಸ್ಥಳ ಮತ್ತು ಜಪ್ತು ಪಂಚನಾಮೆಗಳೆರಡನ್ನು ಪೋಲೀಸ್ ಠಾಣೆಯಲ್ಲಿ ತಯಾರಿಸಿ ಸಾಕ್ಷಿದಾರರ ಸಹಿಗಳನ್ನು ಕೂಡ ಪೋಲೀಸ್ ಠಾಣೆಯಲ್ಲಿಯೇ ಪಡೆಯಲಾಗಿತ್ತು ಎನ್ನುವ ಸೂಚನೆಗಳನ್ನು ನಿರಾಕರಿಸಿದ್ದಾರೆ. ಪ್ರಾ.ಸಾ.4 ತಾನು ಚಾ.ಸಾ.1 ರವರ ಪ್ರಚೋದನೆಯಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವ ಸೂಚನೆಯನ್ನು ನಿರಾಕರಿಸಿದ್ದಾರೆ.

**<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರಡಿಯಲ್ಲಿ ಆರೋಪಿಯ ಹೇಳಿಕೆ</u>**

ಆರೋಪಿಯ ವಿರುದ್ಧ ಇರುವ ಎಲ್ಲಾ ಹೇಳಿಕೆಗಳನ್ನು ಆರೋಪಿಗೆ ಓದಿ ಹೇಳಲಾಯಿತು ಮತ್ತು ಆರೋಪಿಯು ಅವುಗಳನ್ನು ಸುಳ್ಳು ಎಂದು ನಿರಾಕರಿಸಿ ತಾನು ಸಕಲೇಶಪುರದಲ್ಲಿರುವ ಚಾ.ಸಾ.1 ರವರಿಗೆ ಸೇರಿದ ಕಾಫಿ ತೋಟದಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದು ತನಗೆ ಮೂರು

ತಿಂಗಳ ಸಂಬಳ ಬಾಕಿ ಇದೆ ಎಂದಿದ್ದಾರೆ. ಆರೋಪಿಯು ಮುಂದುವರಿದು ತಾನು ಚಾ.ಸಾ.1 ರವರಿಂದ ಸಂಬಳ ಪಾವತಿ ಮಾಡಲು ಕೇಳಿಕೊಂಡಾಗ ಆತ ಪಾವತಿ ಮಾಡಿಲ್ಲ ಮತ್ತು ಈ ಬಗ್ಗೆ ತಾನು ಸಕಲೇಶಪುರ ಪೋಲೀಸರಿಗೆ ದೂರು ಕೊಟ್ಟಾಗ ಚಾ.ಸಾ.1 ತನ್ನ ವಿರುದ್ಧ ಸುಳ್ಳು ಫಿರ್ಯಾದಿಯನ್ನು ದಾಖಲಿಸಿದ್ದರು ಎನ್ನುತ್ತಾರೆ. ಆರೋಪಿಯು ತಾನು ಸಕಲೇಶಪುರ ಪೋಲೀಸರ ಮುಂದೆ ಸಲ್ಲಿಸಿದ್ದ ಫಿರ್ಯಾದಿಯ ನಕಲನ್ನು ಹಾಜರು ಪಡಿಸಿರುತ್ತಾರೆ.

## ಅಭಿಯೋಜನೆಯ ಪರ ವಾದ

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಭಿಯೋಜನೆಯ ಪ್ರಕರಣವು ಸಾಂಧರ್ಭಿಕ ಸಾಕ್ಷಿಯ ಮೇಲೆ ಅವಲಂಬಿತವಾಗಿದೆ ಎಂದು ವಾದಿಸುತ್ತಾರೆ. ಅಭಿಯೋಜನೆಯು ಆರೋಪಿಯ ಮೇಲಿನ ಆರೋಪವನ್ನು ಸಾಬೀತು ಪಡಿಸಲು ಎರಡು ಮುಖ್ಯ ಸಂದರ್ಭಗಳನ್ನು ಸಾಬೀತು ಪಡಿಸಬೇಕು ಅವುಗಳೆಂದರೆ, ಚಾ.ಸಾ.1 ರವರ ಮನೆಯಲ್ಲಿ ಆದ ಕಳ್ಳತನ ಮತ್ತು ಆರೋಪಿಯಿಂದ ಕಳ್ಳತನವಾದ ವಸ್ತುಗಳ ಜಪ್ತು. ಚಾ.ಸಾ.1 ರವರ ಮನೆಯಲ್ಲಿ ಕಳ್ಳತನವಾಗಿರುವುದು ಚಾ.ಸಾ.1/ಪ್ರಾ.ಸಾ.1, ಚಾ.ಸಾ.2/ಪ್ರಾ.ಸಾ.2 ಮತ್ತು ಚಾ.ಸಾ.8/ಪ್ರಾ.ಸಾ.4 ಇವರುಗಳ ಸಾಕ್ಷಿಗಳಿಂದ ಸಾಬೀತಾಗಿದ್ದು ಮತ್ತು ನಿಶಾನೆ ಪಿ.2 ಸ್ಥಳ ಮಹಜರು ಮತ್ತು ನಿಶಾನೆ ಪಿ.5 ಸ್ಥಳ ನಕಾಶೆಯಿಂದ ದೃಢೀಕರಿಸಲ್ಪಟ್ಟಿದೆ. 2ನೇ ಮತ್ತು ಮುಖ್ಯ ಸಂದರ್ಭವಾದ ಆರೋಪಿಯಿಂದ ಕಳ್ಳತನದ ವಸ್ತುಗಳ ಜಪ್ತಿಯನ್ನು ಕೂಡ ಅಭಿಯೋಜನೆಯು ಚಾ.ಸಾ.2/ಪ್ರಾ.ಸಾ.2 ಮತ್ತು ಚಾ.ಸಾ.4/ಪ್ರಾ.ಸಾ.3 ಇವರ ಸಾಕ್ಷ್ಯದಿಂದ ಸಾಬೀತು ಪಡಿಸಲಾಗಿದೆ. ಆ ಜಪ್ತನ್ನು ಆರೋಪಿಯು ನಿಶಾನೆ ಪಿ.7 ರಂತೆ ಕೊಟ್ಟಂತಹ ಸ್ವ-ಇಚ್ಛಾ ಹೇಳಿಕೆಯ ಪ್ರಕಾರ ಮಾಡಲಾಗಿದೆ. ಮುಂದುವರಿದು ಈ ಎಲ್ಲಾ ಸಾಕ್ಷಿದಾರರನ್ನು ಆರೋಪಿ ಪರ ಮಾನ್ಯ ವಕೀಲರು ಪಾಟೀ ಸವಾಲು ಮಾಡಿದ್ದರು ಕೂಡ ಅವರ ಪಾಟೀ ಸವಾಲಿನಲ್ಲಿ ಯಾವುದೇ ಪ್ರಮುಖ ಅಂಶಗಳನ್ನು ಹೊರತರಲು ಆಗಿಲ್ಲ ಎಂದು ವಾದಿಸುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿಯು ಯಾವುದೇ ದುರ್ಬಲತೆಯಿಂದ ಹೊರತಾಗಿದ್ದು ಅಭಿಯೋಜನೆಯ ಪ್ರಕರಣವನ್ನು ಸಂಶಯಾತೀತವಾಗಿ ಸಾಬೀತು ಪಡಿಸುತ್ತದೆ ಎಂದು ವಾದಿಸುತ್ತಾರೆ. ಆದುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರು ಆರೋಪಿಯನ್ನು ಶಿಕ್ಷಿಸಲು ಕೋರುತ್ತಾರೆ.

Scan this
QR Code to
Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide
AI based Smart Preparation for
Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)

<u>ಆರೋಪಿಯ ಪರ ವಾದ</u>

ಆರೋಪಿ ಪರ ಮಾನ್ಯ ವಕೀಲರು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷ್ಯದಲ್ಲಿ ತುಂಬ ವಿರೋದಾಬಾಸಗಳು, ವ್ಯತ್ಯಾಸಗಳು ಮತ್ತು ನ್ಯೂನ್ಯತೆಗಳು ಇವೆ ಎಂದು ವಾದಿಸುತ್ತಾರೆ. ಮುಂದುವರಿದು ಆರೋಪಿಯು ಚಾ.ಸಾ.1ರವರ ಕಾಫಿ ತೋಟದಲ್ಲಿ ಡ್ರೈವರ್ ಆಗಿ ಕೆಲಸ ಮಾಡುತಿದ್ದುದು ಒಪ್ಪಿಕೊಂಡ ಅಂಶವಾಗಿದ್ದು ಚಾ.ಸಾ.1 ಮತ್ತು ಆರೋಪಿಯ ನಡುವೆ ಸಂಬಳ ಪಾವತಿಯ ಬಗ್ಗೆ ಅವರ ನಡುವೆ ವೈರತ್ವ ಇದೆ ಎಂದು ವಾದಿಸುತ್ತಾರೆ. ಆ ವೈರತ್ವದ ಕಾರಣ ಚಾ.ಸಾ.1 ಆರೋಪಿಯ ವಿರುದ್ಧ ಸುಳ್ಳು ಫಿರ್ಯಾದಿಯನ್ನು ದಾಖಲು ಮಾಡಿದ್ದರು ಎಂದು ವಾದಿಸುತ್ತಾರೆ. ಆರೋಪಿ ಪರ ಮಾನ್ಯ ವಕೀಲರು ಅಭಿಯೋಜನೆಯ ಪರ ವಿಚಾರಣೆ ಮಾಡಿದ ಎಲ್ಲಾ ಸಾಕ್ಷಿದಾರರು ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿದ್ದು ಸ್ವತಂತ್ರ ಸಾಕ್ಷಿದಾರರು ದೊರಕುತ್ತಿದ್ದರೂ ಕೂಡ ತನಿಖಾಧಿಕಾರಿಯವರು ಕೇವಲ ಚಾ.ಸಾ.1 ರವರ ಗೆಳೆಯರನ್ನು ಮತ್ತು ಏಜೆಂಟರನ್ನು ಸ್ಥಳ ಮತ್ತು ಜಪ್ತು ಮಹಜರಿಗೆ ಸಾಕ್ಷಿದಾರರನ್ನಾಗಿ ಮಾಡಿದ್ದರು ಎಂದು ವಾದಿಸುತ್ತಾರೆ. ಆರೋಪಿಪರ ಮಾನ್ಯ ವಕೀಲರು ಮುಂದುವರಿದು ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸಲು ಯಾವುದೇ ನೇರವಾದ ಸಾಕ್ಷಿ ಇರುವುದಿಲ್ಲ ಮತ್ತು ಅಭಿಯೋಜನೆಯು ಹಾಜರು ಪಡಿಸಿದ ಸಾಕ್ಷಿಯು ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಪಡಿಸುವ ಸಂದರ್ಭಗಳನ್ನು ಸಂಪರ್ಕಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ವಾದಿಸುತ್ತಾರೆ. ಈ ಎಲ್ಲಾ ಕಾರಣಗಳಿಂದ ಆರೋಪಿ ಪರ ಮಾನ್ಯ ವಕೀಲರು ಆರೋಪಿಗೆ ಸಂಶಯದ ಲಾಭವನ್ನು ನೀಡಿ ಬಿಡುಗಡೆ ಮಾಡಲು ಕೋರಿಕೊಂಡಿದ್ದಾರೆ.

*********

Scan this QR Code to Linking Laws BIOs
Linking Laws
LinkingLaws Tansukh sir
www.LinkingLaws.com
Get Subscription Now
Linking Laws is a Professional Institute provide AI based Smart Preparation for Judicial Service Exams & other Law Related Exam in India
(UP PCS(J), RJS, MPCJ, CG PCS(J), DJS, BJS, APO, ADPO, JLO, APP etc.)